ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ : ದಯವಿಟ್ಟು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಈಗ ಏನು ಕಡಲ ಕೊರೆತದ ಬಗ್ಗೆ ಚರ್ಚೆಯಾಯಿತು ಅದಕ್ಕಿಂತಲೂ ದೊಡ್ಡ ಸಮಸ್ಯೆ ನೇಕಾರರಿಗೆ ಇದೆ. ನೇಕಾರರಿಗೆ ಒಂದು ಹೊತ್ತು ಊಟಕ್ಕೂ ಗತಿ ಇಲ್ಲ. ಆದ್ದರಿಂದ ದಯವಿಟ್ಟು ಪರಿಗಣಿಸಿ ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಅವಕಾಶ ಮಾಡಿಕೊಡುತ್ತೇನೆಂದು ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದ ಮೇಲೆ ಹೀಗೆ ಮಾಡಿದರೆ ಹೇಗೆ ? ಈಗ ನೀವು ನೋಟೀಸ್ ಕೊಟ್ಟಿದ್ದೀರಿ. ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ : ಮಾನ್ಯ ಅಧ್ಯಕ್ಷರೆ, ನಾಳೆ ಹೊಸ ಸಮಸ್ಯೆ ಸೃಷ್ಟಿಯಾದಾಗ ಇಲ್ಲಿ ಬಡವರನ್ನು ಯಾರೂ ಕೇಳುವುದೇ ಇಲ್ಲ. ಏಕೆಂದರೆ ಮತ್ತೆ ಯಾವುದೇ ಸಮಸ್ಯೆ ಬಂದಾಗ...

ಅಧ್ಯಕ್ಷರು : ನೀವು ನೋಟೀಸ್ ಕೊಟ್ಟಿರುವುದರಿಂದ ನಿಯಮ 69ರ ಅಡಿಯಲ್ಲಿ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಬೇಕು. ಅವಕಾಶ ಮಾಡಿಕೊಡುತ್ತೇನೆ.

7. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ (ಮುಂದುವರೆದ ಚರ್ಚೆ):

†ಡಾ; ಜಿ. ಪರಮೇಶ್ವರ್ (ಮಧುಗಿರಿ) : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ ಚರ್ಚೆಯನ್ನು ಪ್ರಾರಂಭ ಮಾಡಿ ಸುಮಾರು ವಿಷಯಗಳನ್ನು ಪ್ರಸ್ತಾಪ ಮಾಡಿದೆ. ಈ ರಾಜ್ಯದ ಆರ್ಥಿಕ ವ್ಯವಸ್ಥೆಯ ಬಗ್ಗೆ ಒಂದು ಪಕ್ಷಿನೋಟವನ್ನು ನೋಡತಕ್ಕಂಥ ಸಂದರ್ಭದಲ್ಲಿ ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಸೆಕ್ಟಾರ್‌ನಲ್ಲಿ ಯಾವ ರೀತಿ ಬೆಳವಣಿಗೆಯಾಗಿದೆ. ಅಭಿವೃದ್ಧಿಯಾಗಿದೆ ಎನ್ನತಕ್ಕಂಥದ್ದನ್ನು ವಿಶ್ಲೇಷಣೆ ಮಾಡತಕ್ಕಂಥ ಸಂದರ್ಭದಲ್ಲಿ tertiary sector ಅಂದರೆ service sector ಈ ನಲ್ಲಿ ವಿಶೇಷವಾಗಿ ಅದರಲ್ಲೂ ಕೂಡ information technology ಇರಬಹುದು bio-technology ಇರಬಹುದು, health service ಇರಬಹುದು ಈ service sector ನಲ್ಲಿ ನಮಗೆ National Average ಗಿಂತ ಅಂದರೆ National Average 9 ಸೆಪ್ಟೆಂಬರ್ ಇದ್ದರೆ ನಮ್ಮ ರಾಜ್ಯದ್ದು ಸುಮಾರು 10.3 ರಿಂದ 11.5ರವರೆಗೆ ಬೆಳವಣಿಗೆ ಆಗಿದೆ ಎನ್ನುವಂಥನ್ನು ಪ್ರಸ್ತಾಪ ಮಾಡುತ್ತಿದ್ದೆ. information technology ಅದರಲ್ಲಿ ಯಲ್ಲಿ ಬಹಳಷ್ಟು ಸಾಧನೆ ನಮ್ಮ ರಾಜ್ಯದಲ್ಲಿ ಆಗಿದೆ ಎನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡುವಾಗ ಅಲ್ಲಿಗೆ ಸಮಯ ಆಯಿತೆಂದು ತಾವು ಸದನವನ್ನು Adjourn ಮಾಡಿದಿರಿ. ಸನ್ಮಾನ್ಯ ಅಧ್ಯಕ್ಷರೆ, ನಮಗೆ ಕಳೆದ 3 ವರ್ಷ ಸತತವಾಗಿ ಬರಗಾಲ ಬಂದಾಗ, ಕೃಷಿ ಕ್ಷೇತ್ರ ಅತ್ಯಂತ ಹೆಚ್ಚು ಹಣವನ್ನು ನಮಗೆ ಒದಗಿಸತಕ್ಕಂಥ

ಕ್ಷೇತ್ರವಾಗಿದೆ. ನಮ್ಮ economic index ನಲ್ಲಿ ಕೃಷಿ ಕ್ಷೇತ್ರ ಕೂಡ ಹೆಚ್ಚು ಹಣವನ್ನು ಒದಗಿಸತಕ್ಕಂಥದ್ದು., ಉದ್ಯೋವನ್ನು ಒದಗಿಸತಕ್ಕಂಥದ್ದು ಈ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹಣವನ್ನು ಒದಗಿಸತಕ್ಕಂಥ ಈ ಕ್ಷೇತ್ರದಲ್ಲಿ ತೊಂದರೆ ಆಯಿತು. ಅದಕ್ಕಾಗಿ ನಮಗೆ negative growth ಆಯಿತು ಎನ್ನತಕ್ಕಂಥ ಮಾತನ್ನು ಪ್ರಸ್ಥಾಪ ಮಾಡಿದ್ದೆ. ಅದಕ್ಕೆ ಅನೇಕ ಸುಧಾರಣೆಗಳನ್ನು ಮಾನ್ಯ ಎಸ್.ಎಂ. ಕೃಷ್ಣ ಅವರ ಸರ್ಕಾರ ಕಳೆದ 1999ರಿಂದ 2004ರವರೆಗೆ ಕೂಡ ಬದಲಾವಣೆಗಳನ್ನು ತರುವುದಕ್ಕೆ ಮಾಡಿತು. ಅದರಲ್ಲಿ ಕೆಲವು ಬಹಳ ಪ್ರಮುಖವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಏಕೆಂದರೆ, ಪ್ರಸ್ತುತವಾದ ಸರ್ಕಾರಕ್ಕೆ ಕೂಡ ಈ ಸುಧಾರಣೆಗಳು ಬೇಕಾಗುತ್ತದೆ. ಅವಶ್ಯಕತೆ ಇದೆ ಎನ್ನುವ ದೃಷ್ಟಿಯಿಂದ ಇದನ್ನು ನಾನು ಪ್ರಸ್ತಾಪ ಮಾಡುತ್ತೇನೆ. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಒಂದು Administrative Reforms Committee ಅನ್ನು ಸರ್ಕಾರ ಮಾಡಿತು. ಅದರಲ್ಲಿ ಹೆಚ್ಚು ಜನ ಅಧಿಕಾರಿಗಳು ಇದ್ದಾರೆ. ನಮಗೆ ಒಂದು ಕಲ್ಪನೆ ಇದೆ ಮತ್ತು ಅದು ನಿಜವೂ ಕೂಡ ಆಗಿದೆ. ಅನೇಕ ಇಲಾಖೆಗಳಲ್ಲಿ ನಮ್ಮ ಅವಶ್ಯಕತೆಗಿಂತ ಹೆಚ್ಚು ಜನ ಅಧಿಕಾರಿಗಳು ಇದ್ದಾರೆ. ಅವರನ್ನು ಕಡಿಮೆ ಮಾಡಬೇಕು. ಆದ್ದರಿಂದ ನಮಗೆ ಆರ್ಥಿಕವಾಗಿ ಕೂಡ ಅನುಕೂಲವಾಗುತ್ತದೆ ಎನ್ನತಕ್ಕಂಥದ್ದು ಮತ್ತು ಇನ್ನೊಂದು ಪ್ರಾಮುಖ್ಯವಾದ ದೃಷ್ಟಿಯಿಂದ ಈ red-tapism ನಮ್ಮ secretariat ನಲ್ಲಿ ಇರಬಹುದು ಅಥವಾ ಬೇರೆ ಬೇರೆ ಇಲಾಖೆಗಳಲ್ಲಿ ಇರಬಹುದು. M.S. Buildingನ secretariat ನಿಂದ ಒಬ್ಬ ಸಚಿವರಿಗೆ ಒಂದು ಕಡತ ಬರಬೇಕಾದರೆ 13 ಸೇಜ್ ಪಾಸ್ ಆಗಬೇಕಾಗಿತ್ತು. ಇದರ ಬಗ್ಗೆ ಹಿಂದೆ ಕೂಡ ಅನೇಕ ಸಂದರ್ಭದಲ್ಲಿ ಪ್ರಸ್ತಾಪ ಆಗಿತ್ತು. 13 ಜನ ಅದರ ಮೇಲೆ signature ಹಾಕಬೇಕು. ಆ ಸಿಗ್ನೇಚರ್ ಏನಪ್ಪ ಬರೆಯುತ್ತಾರೆಂದರೆ, ಅದನ್ನೇ ಬರೆಯುವುದು. ಅವರೇನೂ ಬೇರೆ ಬರೆಯುವುದಿಲ್ಲ. ಒಂದು ಫೈಲ್‌ನಲ್ಲಿ ಒಬ್ಬ ಕೇಸ್ ವರ್ಕರ್ ಏನು ಬರೆದಿದ್ದಾರೆ ಅದನ್ನೇ ಬರೆಯುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹೆಚ್ಚಾಗಿ ಬರೀ ಸಿಗ್ನೇಚರ್ ಹಾಕುತ್ತಾರೆ. ಏನೂ ಬರೆಯುವುದಿಲ್ಲ.

ಡಾ; ಜಿ. ಪರಮೇಶ್ವರ್ : ಅಥವಾ ಬರೀ ಸಿಗ್ನೇಚರ್ ಹಾಕುತ್ತಾರೆ. ಅಂತಿಮವಾಗಿ ಸಚಿವರಿಗೆ ಬಂದು ಸಚಿವರ ಆದೇಶ ಆಗಬೇಕಾದರೆ ಸಚಿವರೂ ಕೂಡ ಬೇರೆ ಬರೆಯುವ ಹಾಗಿಲ್ಲ. ಅನೇಕ ಸಂದರ್ಭದಲ್ಲಿ ಅದನ್ನೇ ಅವರೂ ಕೂಡ ಬರೆಯಬೇಕಾಗುತ್ತದೆ. ಈ ಆಡಳಿತ ಸುಧಾರಣೆಯ ದೃಷ್ಟಿಯಿಂದ ಅದನ್ನು ಕೂಡ ಕಡಿಮೆ ಮಾಡಬೇಕು ಎನ್ನುವಂಥ ಒಂದು ಲೆಕ್ಕಾಚಾರವನ್ನು ಕೂಡ ಹಾಕಿದ್ದು ಆಯಿತು. Administrative Reforms Committee ಯಲ್ಲಿ ಅದನ್ನು ಕೂಡ ಸಲಹೆ ಮಾಡಿದ್ದಾರೆ. ಅದಕ್ಕಾಗಿ ಪ್ರಪ್ರಥಮ ಬಾರಿಗೆ ಈ ರಾಜ್ಯದಲ್ಲಿ Transparency Act ಎಂದು ತಂದರು. ಅಂದರೆ ಯಾರೇ ಒಬ್ಬ ವ್ಯಕ್ತಿ ಒಂದು ಕಡತ ಆಗಬಹುದು. ಒಂದು ಕಾಗದ ಪತ್ರ ಆಗಬಹುದು. ಸರ್ಕಾರದಲ್ಲಿ ...

ಅಧಿಕಾರಿಗಳನ್ನು ಕೇಳಿ ತೆಗೆದುಕೊಳ್ಳಬೇಕೆಂದು ಅವಕಾಶವನ್ನು ಕಲ್ಪಿಸಿಕೊಡುವುದಾದರೆ ಬಹುಶಃ ಕಡತ ಆಗಲಿ, ಆ ಕೆಲಸ ಆಗಲಿ ಯಾವ ಮಟ್ಟದಲ್ಲಿ ಇದೆ. ಯಾವ ಹಂತದಲ್ಲಿ ಇದೆ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಅಧಿಕಾರಿಗಳು ಹೆಚ್ಚು ಚುರುಕಾಗಬಹುದು. ಸರ್ಕಾರ ಹೆಚ್ಚು ಚುರುಕಾಗಬಹುದು ಎಂದು ನಾವು ಆ Transparencey Act ಅನ್ನು ಪ್ರಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ತಂದೆವು.

(ಈ ಹಂತದಲ್ಲಿ ಛೇರ್‌ಮನ್‌ರವರಾದ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ಅವರು ಅಧ್ಯಕ್ಷರ ಪೀಠವನ್ನಲಂಕರಿಸಿದ್ದರು)

ಬೇರೆ ರಾಜ್ಯದವರೂ ಕೂಡ ಅದನ್ನು ಅನುಸರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರ ಜೊತೆ ಇನ್ನೂ ಅನೇಕ ಬದಲಾವಣೆಗಳನ್ನು ತರಲಾಗಿದೆ. ಉದಾಹರಣೆಗೆ Treasury ಯಲ್ಲಿ computerization ಮಾಡತಕ್ಕಂಥ ಕೆಲಸವನ್ನು ಮಾಡಿದೆವು. ಅದರ ಉದ್ದೇಶ ಏನೆಂದರೆ, ಸರ್ಕಾರಕ್ಕೆ ಎಷ್ಟು ಹಣ ಬರುತ್ತದೆ, ಪ್ರತಿನಿತ್ಯ ಎಷ್ಟು ಹಣ ಖರ್ಚಾಗುತ್ತದೆ, ಕೆಲವು ಸಂದರ್ಭದಲ್ಲಿ ಏನಾಗುತ್ತದೆ ಎಂದರೆ, ಈ LOC ಕೊಡುವಂಥ ಸಂದರ್ಭದಲ್ಲಿ ಅದು ಹೇಗೆ ಆಗುತ್ತದೆಂದು ತಮಗೆ ಕೂಡ ಗೊತ್ತಿದೆ. ಇವತ್ತು ಇವೆಲ್ಲವನ್ನೂ ಕೂಡ regulate ಮಾಡುವುದಕ್ಕೆ ಎಲ್ಲಾದರೂ ಒಂದು ವ್ಯವಸ್ಥೆ ಬೇಕಾಗುತ್ತದೆಂದು ಇವತ್ತು ಆ Treasury ಗಳನ್ನು computerize ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಕೂಡ ಸರ್ಕಾರ ಮಾಡಿತು. ಇದರ ಜೊತೆಗೆ ಇವತ್ತು ನಮ್ಮ ರಾಜ್ಯದಲ್ಲಿ ಕಂದಾಯ ಇಲಾಖೆ, ಸುಮಾರು 2 ಕೋಟಿ ಕಂದಾಯದ್ದು ಅಂದರೆ ಈ ರೆಕಾರ್ಡ್ ಇರತಕ್ಕಂಥದ್ದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇಷ್ಟೊಂದು ಸಂಖ್ಯೆಯಲ್ಲಿರತಕ್ಕಂಥ ಕಂದಾಯ ಇಲಾಖೆಯಲ್ಲಿರತಕ್ಕಂಥ ರೆಕಾರ್ಡ್ಸ್‌ನ್ನು ಸುಮಾರು 67 ಲಕ್ಷ ರೈತರು, ಅವರಿಗೆ ಬೇಕಾದಂಥ ಪಹಣಿ ಇರಬಹುದು, ಅವರಿಗೆ ಬೇಕಾದಂತ ಆರ್ ಆರ್ ಇರಬಹುದು. ಇದು ಬೇಕಾದರೆ ವರ್ಷಾನುಬಗಟ್ಟಲೆ ಅವರನ್ನು ತಿರುಗಿಸತಕ್ಕಂಥದ್ದನ್ನು ನಾವು ತಾಲ್ಲೂಕು ಕಛೇರಿಗಳಲ್ಲಿಲ ನೋಡಿದ್ದೇವೆ. ನಮ್ಮ ಸೆಕ್ರೇಟರಿಗಳು ತಾಲ್ಲೂಕಿನಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೆನ್ನುವುದನ್ನು ನೋಡಿದ್ದೇವೆ. ನಾನು ನಿನ್ನೆ ಹೇಳುತ್ತಿದ್ದೆ ಟೆಕ್ನಾಲಾಜೀಕಲ್ ಅಡ್ವಾನ್ಸ್ ಬಗ್ಗೆ ಹೇಳುತ್ತಿದ್ದಾ ತಾವು ಇಲ್ಲಿ ಇದ್ದಿರಿ, ಯಾವ ರೀತಿಯಲ್ಲಿ fall out effect information technology ಯಿಂದ ಆಗಿದೆ ಎಂದು ಹೇಳುವಾಗಲೇ ಗಂಟೆ ಹೊಡೆದರು ಅದಕ್ಕೋಸ್ಕರ ಅದನ್ನು ಹೇಳುವುದಕ್ಕಾಗಲಿಲ್ಲ. ಈ information Technology ರನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಬದಲಾವಣೆ fall out effect ಏನಾಗಿದೆ ಎಂದು ಹೇಳಿದರೆ, ಅದನ್ನು ಉಪಯೋಗ ಮಾಡಿಕೊಂಡು ನಾವು ಭೂಮಿ ಕಾರ್ಯಕ್ರಮವನ್ನು ಜಾರಿಗೆ ತಂದೆವು. ಪಹಣಿಯನ್ನು ರೈತ ತೆಗೆದುಕೊಳ್ಳಬೇಕಾಗಿದ್ದರೆ ಆ ರೈತನು 5 ರೂಪಾಯಿ ಕೊಟ್ಟರೆ 5 ನಿಮಿಷದಲ್ಲಿ ಅವನಿಗೆ ಪಹಣಿ ಸಿಗುತ್ತದೆ. ಬಹುಶಃ ಇಡೀ ದೇಶದಲ್ಲಿ ಪ್ರಪ್ರಥಮ ಬಾರಿಗೆ ನಮ್ಮ

ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ನಾವು ಜಾರಿಗೆ ತಂದೆವು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದರಿಂದ ಆಗಿರತಕ್ಕಂಥ ತೊಂದರೆ ಏನಾದರೂ ನಿಮ್ಮ ಗಮನಕ್ಕೆ ಬಂದಿದಿಯೇ ?

ಡಾ; ಜಿ. ಪರಮೇಶ್ವರ್ : ಅದಿರಲಿ ಅದನ್ನು ಸರಿಪಡಿಸೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ.

ಡಾ; ಜಿ. ಪರಮೇಶ್ವರ್ : ನೋ ನಾನು ಯೀಲ್ಡ್ ಆಗುವುದಿಲ್ಲ. ಏಕೆಂದರೆ ನಿನ್ನೆ ನಾನು ಯೀಲ್ಡ್ ಆಗಿ ಯೀಲ್ಡ್ ಆಗಿ ಬಹಳ ಮುಂದಕ್ಕೆ ಹೊರಟು ಹೋಯಿತು. ನಂದು,

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ತಿದ್ದುಪಡಿ ಮಾಡಬೇಕಾದರೂ ಅವನು 150 ರೂಪಾಯಿ ಕೊಡಬೇಕು. ಒಂದೇ ಒಂದು ಮರವನ್ನು ಅದರಲ್ಲಿ ಎಂಟ್ರಿ ಕೊಟ್ಟಿಲ್ಲ, ಡಾಕ್ಟರೇ ಇವತ್ತಿನವರೆವಿಗೂ ಯಾವ ರೈತರೂ ಒಂದು ಮರವನ್ನು ಕಟ್ ಮಾಡುವುದಕ್ಕಾಗಿಲ್ಲ.

ಡಾ; ಜಿ. ಪರಮೇಶ್ವರ್ : ಅದನ್ನು ಬದಲಾವಣೆ ಅಥವಾ ಉತ್ತಮಪಡಿಸುವಂಥದ್ದನ್ನು Let me put it this way. ಉತ್ತಮಪಡಿಸತಕ್ಕಂಥನ್ನು ಏನು ಬೇಕಾದರೂ ಮಾಡಬಹುದು.you can add on another rules, another ಆದರೆ ಇಡೀ ದೇಶದಲ್ಲಿ ಪ್ರಥಮಭಾರಿಗೆ, ತಾವು ಒಪ್ಪುತ್ತೀರಿ ಐದು ರೂಪಾಯಿ ಕೊಟ್ಟರೆ ಪಹಣಿ ಸಿಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : 5 ರೂಪಾಯಿ ಅಲ್ಲಾ ಸಾರ್ 15 ರೂಪಾಯಿ, ಎಲ್ಲರೂ ಹಳ್ಳಿಯಿಂದ ತಾಲ್ಲೂಕು ಆಫೀಸ್‌ಗೆ ಬರಬೇಕು.

ಡಾ; ಜಿ. ಪರಮೇಶ್ವರ್ : ಈಗ ಒಂದು ಕಡಿಮೆಯಾಗಿದೆ ಹೊಸ ಜಿ.ಓ. ಇಶ್ಯೂ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಳ್ಳಿಯಿಂದ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ರೈತನು ಬರಬೇಕು ಒಂದು ಸಣ್ಣ ತಪ್ಪು ಇದ್ದರೂ 150 ರೂಪಾಯಿ ಕಟ್ಟಬೇಕು, ಸಣ್ಣ ಮಿಸ್ಟೇಕ್ is committed byvillage Panchayat penalise him by Rs. 150. ಒಂದು ಸಣ್ಣ ತಪ್ಪಿಗೆ ರೈತ ಇವತ್ತು 150 ರೂಪಾಯಿ ದಂಡ ಕಟ್ಟುತ್ತಾನೆ.

ಡಾ; ಜಿ. ಪರಮೇಶ್ವರ್ : ಬದಲಾವಣೆ ತರುವಾಗ ಕೆಲವು abeservations ಇರುತ್ತವೆ, ಅದನ್ನು ಸರಿಪಡಿಸಿಕೊಳ್ಳೋಣ, ಏಕೆಂದರೆ ಇವುಗಳು ಆಗುತ್ತವೆ ಎನ್ನುವ ಕಲ್ಪನೆ ನಮಗೆ ಇರುವುದಿಲ್ಲ. ಆದಾದ ಮೇಲೆ ಸರಿಪಡಿಸಬೇಕು, ಈಗ ಸರಿಪಡಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತದೆ. ಪ್ರಸ್ತುತ ಸರ್ಕಾರ ನಮ್ಮ ಹಳ್ಳಿಗಳ ಮ್ಯಾಪಿಂಗ್ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಇದೆ ನಮಗೆ ಟೆಕ್ನಾಲಜಿ ಅಡ್ವಾನ್ಸ್‌ಮೆಂಟ್ ಆದರೆ ಏನು ಪ್ರಯೋಜನ ಆಗುತ್ತದೆ ಎನ್ನುವಂಥ ದೃಷ್ಟಿಯಲ್ಲಿ, ಇವತ್ತು ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ರಾಜ್ಯಪಾಲರು ತಿಳಿಸಿದ್ದಾರೆ. ವಿಲೇಜ್ ಮ್ಯಾಚಿಂಗ್,

ಪ್ರತಿಯೊಂದು ಹಳ್ಳಿಯನ್ನೂ ಸಹ ಮ್ಯಾಪಿಂಗ್ ಮಾಡಿ ಕಂಪ್ಯೂಟರೈಸ್ ಮಾಡಿ ನಮ್ಮಲ್ಲಿ ಇಟ್ಟುಕೊಂಡರೆ, ಅದರ ಬೆಳವಣಿಗೆಗಾಗಿ, ಮುಂದಕ್ಕೆ ಬದಲಾವಣೆ ಮಾಡಬೇಕಾದರೆ, ಒಂದು ಹಳ್ಳಿಯಲ್ಲಿ ಸೈಟು ಕೊಡಬಹುದು, ಮತ್ತೊಂದು ಹಳ್ಳಿಯಲ್ಲಿ ಬೇರೆ ಬೇರೆ ರಸ್ತೆ ಮಾಡಬಹುದು, ಮತ್ತೊಂದು ಮಾಡಬಹುದು, ಈ ಅಭಿವೃದ್ಧಿ ದೃಷ್ಟಿಯಿಂದ ಈ ವಿಲೇಜ್ ಮ್ಯಾಪಿಂಗ್ ಅನ್ನು ಡಿಜಿಟಲೈಸ್ ಮಾಡಲಿಕ್ಕೆ ಈಗಾಗಲೇ ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿದ್ದಾರೆ. ಸ್ಯಾಟಿಲೈಟ್ ಎಜ್ಯುಕೇಷನ್, ಅದು ಬೇರೆ. ಅಭಿವೃದ್ಧಿ ದೃಷ್ಟಿಯಿಂದ ಏಕೆಂದರೆ ನಾವು ಪ್ರತಿ ಹಳ್ಳಿಯಲ್ಲಿ ಸೈಟು ಕೊಡುತ್ತೇವೆ, ಸೈಟ್ ಕೊಡುವಾಗ ಯಾವುದೋ ಒಂದು ಜಾಗದಲ್ಲಿ ಕೊಡುವುದಕ್ಕಾಗುವುದಿಲ್ಲ. ಅದು ಸರ್ವೇ ನಂಬರ್ ಇರತಕ್ಕಂಥದ್ದು ಯಾರದೋ ಒಬ್ಬರ ಖಾಸಗಿ ಜಮೀನು ಇರುತ್ತದೆ. ಇಂಥವೆಲ್ಲಾ ನಮಗೆ ಡಾಕುಮೆಂಟೇಷನ್ ಇದ್ದರೆ ಅದನ್ನು ಬದಲಾಯಿಸುವ ವ್ಯವಸ್ಥೆಯಲ್ಲಿ ನಮಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಲ್ಲಿ ಅದನ್ನು ಮಾಡಿರುವುದು. ಅದನ್ನು ಬೇರೆ ಬೇರೆ ಕೆಲಸಕ್ಕೂ ಕೂಡ ಉಪಯೋಗ ಮಾಡಿಕೊಳ್ಳಬಹುದು. ಸಧ್ಯಕ್ಕೆ ನಮ್ಮಲ್ಲಿ ಅದಕ್ಕೆ ಸಂಬಂಧಪಟ್ಟ ಯಾವ ಮಾಹಿತಿಯೂ ಇಲ್ಲ. ಮೂರು ವರ್ಷಗಳ ಕಾಲ ಸತತವಾಗಿ ನಾವು ಬರಗಾಲವನ್ನು ಕಂಡೆವು. ಇವತ್ತು ಕೃಷಿ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ತೊಂದರೆಯಾಯಿತು ನಮಗೆ ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದಲ್ಲಿ ಜಿಯೋಗ್ರಾಫಿಕಲ್ ಏರಿಯಾ ಅಂದರೆ ವಿಸ್ತೀರ್ಣ ನಮ್ಮಲ್ಲಿ ಇರತಕ್ಕಂಥದ್ದು 190,5ಲಕ್ಷ ಹೆಕ್ಟೇರ್ ಇಡೀ ಕರ್ನಾಟಕ ರಾಜ್ಯ, ಅದರಲ್ಲಿ ಕೃಷಿಗೆ ಯೋಗ್ಯವಾಗಿರುವಂಥದ್ದು ಸುಮಾರು 121 ಲಕ್ಷ ಹೆಕ್ಟೇರ್. ಎಂದು ನಾವು ಕರೆಯುತ್ತೇವೆ. ಇದರಲ್ಲಿ ನಾವು ಕಲ್ಟಿವೇಟ್ ಮಾಡುತ್ತಿರುವುದು, ಅಂದರೆ ಉಳಿದಿರುವುದು ಇನ್ನೂ ಇದೆ, 107 ಲಕ್ಷ ಹೆಕ್ಟೇರ್ ಮಾತ್ರ ನಾವು ಕಲ್ಟಿವೇಟ್ ಮಾಡುತ್ತಿದ್ದೇವೆ, ಇನ್ನೂ ಬಹಳಷ್ಟು ಉಳಿದಿರುವಂಥದ್ದು ಇದೆ. ಇಷ್ಟರಲ್ಲಿ 107 ಲಕ್ಷ ಹೆಕ್ಟೇರ್ ಕಲ್ಟಿವೇಟ್ ಮಾಡಿ ಸುಮಾರು 20 ಪರ್ಸೆಂಟ್ ಜಿ.ಡಿ.ಪಿ.ಯಲ್ಲಿ ಕೃಷಿ ಕ್ಷೇತ್ರದಿಂದ ಬರುತ್ತದೆ ಎನ್ನುವಂಥದ್ದು. ಏಕೆಂದರೆ, ನಮಗೆ ಕಳೆದ ಮೂರು ವರ್ಷದಲ್ಲಿ ನಾನೂ ನಿನ್ನೆ ಕೂಡ ಈ ವಿಚಾರ ಪ್ರಸ್ತಾಪ ಮಾಡಿದೆ, 106 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಮಾಡತಕ್ಕಂಥದ್ದು, ಕಳೆದ ವರ್ಷ ಬರೀ 65 ಲಕ್ಷ ಮೆಟ್ರಿಕ್ ಕ್ ಟನ್‌ಗೆ ಬಂತು. ಅದಕ್ಕಾಗಿ ನಮಗೆ ನೆಗಿಟಿವ್ ಗ್ರೂಪ್ ಆಯಿತು ಎನ್ನತಕ್ಕಂಥ ಮಾತನ್ನು ನಿನ್ನೆ ನಾನು ಪ್ರಸ್ತಾಪಿಸಿದೆ. ಇವತ್ತು ಬಹಳ ಪ್ರಾಮುಖ್ಯತೆ ಇರತಕ್ಕಂಥದ್ದು, ಈಗಾಗಲೇ ನಮಗೆ ಸರಿಯಾದ ರೀತಿ ಯಲ್ಲಿ ಮಳೆ ಬರಲಿಲ್ಲ. ಸರಿಯಾದ ರೀತಿಯಲ್ಲಿ ಬಿತ್ತನೆ ಬೀಜ ಸಿಗಲಿಲ್ಲ. ಇವೆಲ್ಲ ಸಮಸ್ಯೆಯನ್ನು ಅರಿತುಕೊಂಡು, ಇವತ್ತು ದೈವವಶಾತ್ ನಮಗೆ ಇಲ್ಲಿಯವರೆವಿಗೂ ಮಳೆ ಚೆನ್ನಾಗಿ ಆಗುತ್ತಿದೆ ಬಹುಶಃ ನಾವು ಆಶಾವಾದಿಗಳಾಗಿದ್ದೇವೆ, ಮುಂದೆ ಈ ವರ್ಷ ಚೆನ್ನಾಗಿ ಮಳೆಯಾಗುತ್ತದೆ ಎಂದು ನಂಬಿದ್ದೇವೆ, ಈ ಮೂರು ವರ್ಷಗಳ ಕಷ್ಟದ ದಿವಸದಲ್ಲಿ ಸರ್ಕಾರ ಯಾವ

ರೀತಿಯಲ್ಲಿ ರೈತನ ನೆರವಿಗೆ ಬಂತು, ಎಷ್ಟು ಕಷ್ಟಪಟ್ಟು ರೈತ ಬೆಳೆ ಬೆಳೆಯುತ್ತಾನೆ, ಆದರೆ ಅವನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಬೆಲೆ ಸಿಗುವುದಿಲ್ಲ. ಪ್ರಪ್ರಥಮವಾಗಿ ನಾವು ಬೆಂಬಲ ಬೆಲೆ ಕೊಟ್ಟು, ಸರ್ಕಾರವೇ ಖರೀದಿ ಮಾಡಿ ಅವನಿಗೆ ಅಗತ್ಯವಾದ ಬೆಲೆಯನ್ನು ಕೊಡತಕ್ಕಂಥ ವ್ಯವಸ್ಥೆ. ಮಾನ್ಯ ಛೇರ್ಮನ್‌ರವರೇ, ತಮ್ಮ ಕಡೆ ರಾಗಿ ಬೆಳೆಯುವುದಿಲ್ಲ. ನಮ್ಮ ತುಮಕೂರು, ಹಾಸನ, ಶಿವಮೊಗ್ಗ, ಕೋಲಾರ, ಈ ಬೆಂಗಳೂರು ರೂರಲ್, ಈ ಕಡೆ ಎಲ್ಲಾ ರಾಗಿ ಬೆಳೆಯುತ್ತಾರೆ, ಆ ರಾಗಿ ಬೆಳೆಯತಕ್ಕಂಥ ರೈತ ಬಹಳ ರೈತ ಇದ್ದ ಹಾಗೆ. ಅವನಿಗೆ ಬೆಲೆ ಸಿಗದಿದ್ದರೆ ಎಷ್ಟು ಕಷ್ಟ ಆಗುತ್ತದೆ ? ಅದನ್ನೂ ಕೂಡ ಅಂದರೆ ಅಲ್ಲಲ್ಲಿ ರಾಗಿಯನ್ನೂ ಕೂಡ ಸರ್ಕಾರ ಕೊಂಡುಕೊಳ್ಳುವಂಥ ವ್ಯವಸ್ಥೆ ಮಾಡಿತು. ಜೋಳ, ರಾಗಿ, ಕೊಬ್ಬರಿ, ಜೊತೆಗೆ ಭತ್ತ ಇವೆಲ್ಲವನ್ನು ಕೊಂಡುಕೊಳ್ಳುವಂಥ ವ್ಯವಸ್ಥೆಯನ್ನು ಸರ್ಕಾರ ಏಕೆ ಮಾಡಿತು ಎಂದರೆ ಆ ರೈತನಿಗೆ ಏನಾದರೂ ಸ್ವಲ್ಪ ಸಹಾಯ ಆಗುತ್ತದೆ ಎನ್ನುವ ದೃಷ್ಟಿಯಿಂದ ಮಾಡಿತು. ಇದಕ್ಕಾಗಿ ಸುಮಾರು 200 ಕೋಟಿ ರೂಪಾಯಿ ಹಣವನ್ನು ಒಂದು ರೀತಿಯ ಎಂದು ಹೇಳಿ ಅದಕ್ಕಾಗಿ ಅಷ್ಟು ಹಣವನ್ನು ನಿಗದಿ ಪಡಿಸಿ ಆ ಹಣವನ್ನು ಪ್ರತ್ಯೇಕವಾಗಿ ಇಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಿತು. ಇದರ ಜೊತೆಗೆ ರೈತರು ಅಲ್ಪಾವದಿ ಸಾಲ, ಮಧ್ಯಾಮಾವಧಿ ಸಾಲ, ಈ ರೀತಿಯ ಸಾಲಗಳನ್ನು ಮಾಡಿಕೊಂಡರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ ಯೀಲ್ಡ್ ಆಗಿರಿ. ಡಿಬೇಟ್ ಚೆನ್ನಾಗಿ ಇರುತ್ತದೆ.,

ಡಾ; ಜಿ. ಪರಮೇಶ್ವರ್ : ಮುಗಿಸಿಬಿಡುತ್ತೇನೆ. ನೀವು ಮಾತನಾಡುವಾಗ ಹೇಳಿ.,

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಗಿ ಬೆಳೆ ಹಾಳಾಗಿರುವುದಕ್ಕೆ ಇನ್ಸೂರೆನ್ಸ್ ಎಷ್ಟು ಜನಕ್ಕೆ ಕೊಟಿದ್ದಾರೆ ಹೇಳಿ, ಬಹಳ ಚೆನ್ನಾಗಿ ಮಾತನಾಡಿರಿ, ಎಷ್ಟು ಜನಕ್ಕೆ ಇನ್ಸೂರೆನ್ಸ್ ಕ್ಲೇಮ್ ಕೊಟ್ಟಿದ್ದೀರೆಂದು ಸ್ವಲ್ಪ ಹೇಳಿಕೊಂಡು ಮಾತನಾಡಿದರೆ ಒಳ್ಳೆಯದು.

ಡಾ; ಜಿ. ಪರಮೇಶ್ವರ್ : ಆಯಿತು. ಅನೇಕ, ವ್ಯವಸ್ಥೆಗಳಲ್ಲಿ ಕೆಲವೊಂದು ತಪ್ಪುಗಳು ಆಗಿರುತ್ತವೆ, ಅದಕ್ಕೆ ಕಾರಣನೂ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ ; ತಾವು ವಿಶೇಷವಾಗಿ ರಾಗಿ ಬೆಳೆಯುವ ರೈತರು ಬಡವರು ಎಂದು ಹೇಳಿದಿರಿ, ಕಳಕಳಿ ಎಷ್ಟು ಇದೆ ? ಎರಡು ವರ್ಷದಿಂದ ಇನ್ಸೂರೆನ್ಸ್ ಕವರೇಜ್ ಕೊಟ್ಟರೂ ಇನ್ನೂ ಕ್ಲೇಮ್ ಮಾಡಿಸಿಲ್ಲ ಎಂದು ತಾವು ಸರ್ಕಾರ ನಡೆಸಿದವರು ಹೇಳಬೇಕಲ್ಲವೆ?

ಡಾ; ಜಿ. ಪರಮೇಶ್ವರ್ : ಈಗ ಇನ್ಸೂರೆನ್ಸ್ ಬಗ್ಗೆ, ಕೇಂದ್ರ ಸರ್ಕಾರದವರು ಅವರ ಪಾಲಿಸಿದ್ದು ಕೊಡಬೇಕಲ್ಲಾ. ಅದನ್ನು ಸಕಾಲಕ್ಕೆ ಕೊಡಲಿಲ್ಲ. ಇನ್ನೂ ಕೂಡ ಕೊಡುವುದು ಬಹಳಷ್ಟು ಬಾಕಿ ಇದೆ. ಆ ಕಾರಣಕ್ಕಾಗಿ ಅದನ್ನು ಕೊಡುವುದಕ್ಕಾಗಲಿಲ್ಲ ಅಷ್ಟೆ. ಆದುದರಿಂದ, ಈಗ ಅದನ್ನು ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ ಸರ್ಕಾರ ನೀವು ಇಲ್ಲಿ ನಡೆಸಲಿಲ್ಲವೆ?

ಛೇರ್ಮನ್ : ಮಾನ್ಯ ಮಾಧುಸ್ವಾಮಿಯವರೇ, ಅವರು ಮಾತನಾಡಿ ಮುಗಿಸಲಿ, ನಂತರ ತಾವು ಬೇಕಾದರೆ ಮಾತನಾಡಬಹುದಲ್ಲವೆ ?

ಡಾ; ಜಿ. ಪರಮೇಶ್ವರ್ : ನಾನು ಮಾತನಾಡಿ ಮುಗಿಸಿದ ನಂತರ ಅವರು ಬೇಕಾದರೆ ಮಾತನಾಡಲಿ. I am not going to yield. I cannot give a reply.

ಶ್ರೀ ಜೆ.ಸಿ. ಮಾಧುಸ್ವಾಮಿ ; ರಾಜ್ಯಪಾಲರ ಭಾಷಣಕಷ್ಟೇ ಸೀಮಿತವಾಗಿದ್ದರೆ ನಾವು ಮಾತನಾಡುತ್ತಿದ್ದೆವು.

ಶ್ರೀ ಬಸವರಾಜ್ ರಾಯರೆಡ್ಡಿ : ಅವರು ಮೊದಲು ಮಾತನಾಡಿ ಮುಗಿಸಲಿ ನಂತರ ನಿಮಗೆ ಅವಕಾಶ ಸಿಗುತ್ತದೆ ಅವಾಗ ನೀವು ಮಾತನಾಡಬಹುದು, ಅವರು ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ ? ನೀವೇ ಹೇಳಿ ?

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾದರೆ ಈ ರೀತಿ ಮಾತನಾಡುವುದು ವಾಡಿಕೆ, ಸಂಪ್ರದಾಯ,. ಎಲ್ಲಾ ಚರ್ಚೆಯಾಗುತ್ತದೆ, ನಾವು ಯಾರೂ ಇಲ್ಲಿ ಹುಡುಗರು ಅಲ್ಲ ಒಳ್ಳೆಯ ಚರ್ಚೆ ಆಗುತ್ತದೆ. ರಾಗಿ ಬೆಳೆಯುವ ರೈತರು ಬಂದರು. ಅವರು ಮಂತ್ರಿಗಳಾಗಿದ್ದವರು, ಅವರು ಆ ಜಿಲ್ಲೆಗೆ ಮಂತ್ರಿಯಾಗಿದ್ದವರು. ರಾಗಿ ಬೆಳೆಯುವ ಪ್ರದೇಶಕ್ಕೆ ಅವರಿಗೆ ನಾವು ಅರ್ಜಿ ಕೊಟ್ಟಿದ್ದೇವೆ, ಜನಸಂಪರ್ಕ ಸಭೆ ಮಾಡಿದ್ದಾರೆ, ಅದು ಏನು ಹೇಳುತ್ತಾರೋ ಹೇಳಲಿ.

ಛೇರ್ಮನ್ ; ತಾವು ಯೀಲ್ಡ್ ಆಗಿದ್ದೀರಾ ?

ಡಾ; ಜಿ. ಪರಮೇಶ್ವರ್ : ನಾನು ಯೀಲ್ಡ್ ಆಗಿಲ್ಲ. ಪ್ಲೀಸ್ ಅಲೌಮಿ.

ಶ್ರೀ ಸಿ.ಎಂ. ಉದಾಸಿ : ಹಿಂದಿನ ಸಲ ರಾಜ್ಯಸರ್ಕಾರದಿಂದ ವಿಳಂಬವಾಗಿದೆಯೇ ಹೊರತು ಕೇಂದ್ರ ಸರ್ಕಾರದಿಂದ ವಿಳಂಬವಾಗಿಲ್ಲ.

ಡಾ; ಜಿ. ಪರಮೇಶ್ವರ್ : ಅದಕ್ಕೆ ಸರಿಯಾದ ಉತ್ತರವನ್ನು ಸಂಬಂಧಪಟ್ಟವರು ಸಚಿವರು ಕೊಡುತ್ತಾರೆ,

ಶ್ರೀ ಸಿ.ಎಂ. ಉದಾಸಿ : ಇದೊಂದು ದೊಡ್ಡ ಜಲ್ವಂತ ಸಮಸ್ಯೆಯಾಗಿದೆ. ರೈತರಿಗೆ ಇದು ಒಂದು ಸಮಸ್ಯೆಯಾಗಿದೆ. 11 ಲಕ್ಷ ಹಿಂಗಾರು ಬೆಳೆಯುವ ರೈತರು ಇದ್ದಾರೆ, 8 ಲಕ್ಷ ಮುಂಗಾರು ಬೆಳೆಯುವ ರೈತರು ಇದ್ದಾರೆ. 19 ಲಕ್ಷ ರೈತರ ಸಮಸ್ಯೆ ಇದೆ, ಬೆಳೆ ವಿಮೆ ಪರಿಹಾರ ಇಷ್ಟರಲ್ಲಿಯೇ ಬರಬೇಕಾಗಿತ್ತು. ಅದು ಇದೂವರೆವಿಗೂ ಬಂದಿಲ್ಲವೆನ್ನುವುದು ಬಹಳ ಮಹತ್ವದ ಪ್ರಶ್ನೆಯಿರುವುದರಿಂದ ಅದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಯಾವ ಕಾರಣಕ್ಕಾಗಿ ಅದು ವಿಳಂಬವಾಯಿತು ಎಂಬುದನ್ನು ಹೇಳಿಸಬೇಕಾಗಿತ್ತು. ಇದು ಅತ್ಯಂತ ಮಹತ್ವದ ಪ್ರಶ್ನೆಯಾಗಿದ್ದು ಸುಮಾರು 19 ಲಕ್ಷ ರೈತರ ಸಮಸ್ಯೆಯಾಗಿದೆ, ಇದರ ಬಗ್ಗೆ ತಾವು ದಯಮಾಡಿ ಹೇಳಬೇಕಾಗುತ್ತದೆ.

1.10 ಪಿಎಂ

ಡಾ; ಜಿ. ಪರಮೇಶ್ವರ : ರೈತರು ಸಾಲವನ್ನು ಮಾಡಿಕೊಂಡಿದ್ದಾರೆ. ಅಲ್ಪಾವಧಿ ಸಾಲ ಇರಬಹುದು, ಸಾಲವನ್ನು ಕೊಟ್ಟವರು ಅಲ್ಲಿದ್ದಾರೆ, ಈ ಸಾಲವನ್ನು ಕಟ್ಟುವುದಕ್ಕೆ ವಾಪಸ್ಸು ಕೊಡುವುದಕ್ಕೆ ಈ ಮೂರು ವರ್ಷದ ಸತತ ಬರಗಾಲದಲ್ಲಿ ಯಾವ ರೈತನಿಗೂ ಸಾಧ್ಯವಾಗಲಿಲ್ಲ. ಇದಕ್ಕಾಗಿ ಸರ್ಕಾರ ರೈತನ ಸಹಕಾರಕ್ಕೆ ಬರಬೇಕೆಂದು ಹೇಳಿ ಸಾಲವನ್ನು ಮನ್ನಾ ಮಾಡತಕ್ಕಂಥದ್ದು, ಪ್ರಪ್ರಥಮವಾಗಿ ಬಡ್ಡಿಯನ್ನು ಮನ್ನಾ ಮಾಡತಕ್ಕಂಥದ್ದು 127 ಕೋಟಿ ರೂ.ಗಳ ಬಡ್ಡಿಯನ್ನು ಪ್ರಪ್ರಥಮವಾಗಿ ಮನ್ನಾ ಮಾಡತಕ್ಕಂಥದ್ದು. ನಂತರ ಸಾಲವನ್ನು ಮನ್ನಾ ಮಾಡತಕ್ಕಂಥ ಕೆಲಸವನ್ನೂ ಕೂಡ ಸರ್ಕಾರ ತೆಗೆದುಕೊಂಡಿತು. ಮತ್ತೊಂದು ಪ್ರಾಮುಖ್ಯವಾದ ವಿಚಾರ ವಿದ್ಯುಚ್ಛಕ್ತಿ, ಒಬ್ಬೊಬ್ಬ ರೈತನಿಗೆ 30,40,50, ರಿಂದ ಒಂದು ಲಕ್ಷ ರೂ.ಗಳವರೆಗೆ ಕೂಡ ಆ ಬಿಲ್‌ನ್ನು ಕಟ್ಟತಕ್ಕಂಥದ್ದು ಅವರಿಗೆ ಆಗಿದೆ. ಸರ್ಕಾರ ಇದನ್ನು ಗಮನಿಸಿತು. ಪ್ರಪ್ರಥಮವಾಗಿ ಇದರ ಮೇಲೆ ಬಡ್ಡಿ ಅಷ್ಟೇ ಮನ್ನಾ ಮಾಡಿ ಬಿಡೋಣ ಎಂದು ತೀರ್ಮಾನ ಮಾಡಿದೆವು. ತದನಂತರ ಅದು ಇನ್ನೂ ಕೂಡ ಕಷ್ಟವಾಗುತ್ತದೆಂದು ಹೇಳಿ, ರೈತರಿಂದ ಮತ್ತೆ ಬೇಡಿಕೆ ಬಂದಂಥ ಸಂದರ್ಭದಲ್ಲಿ ಸದನದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರು, ಆಗ ಅವರ ಬಾಕಿ ಪೂರ್ತಿಯಾಗಿ ಏನಿತ್ತು ಅಷ್ಟನ್ನೂ ಕೂಡ ಮನ್ನಾ ಮಾಡಬೇಕೆಂದು ಹೇಳಿ ಸರ್ಕಾರ ತೀರ್ಮಾನಿಸಿತು. ಅದು ಹೆಚ್ಚು ಕಡಿಮೆ 1000 ಕೋಟಿ ರೂಪಾಯಿ ಇಷ್ಟೊಂದು ಮನ್ನಾ ಯಾವ ಸರ್ಕಾರ ಕೂಡ ಮಾಡುವುದಕಾಗುವುದಿಲ್ಲ ಮಾನ್ಯ ಮಾಧುಸ್ವಾಮಿಯವರೇ,

ಶ್ರೀ ಜೆ.ಸಿ. ಮಾಧುಸ್ವಾಮಿ : ಕಳ್ಳರು ಕದ್ದಿದ್ದೀರಿ ಎಂದು ಹೇಳಿದಿರಿ, ಪುಲಕೇಶಿ ಪಡೆ ಮಾಡಿದ್ದೇವೆಂದು ಹೇಳಿದಿರಿ, ಫ್ಯೂಜ್ ಕಿತ್ತುಕೊಂಡು ಬನ್ನಿ ಎಂದು ಹೇಳಿದಿರಿ, ನೀವು ರೈತರ ಜೀವವನ್ನು ತೆಗೆದುಕೊಂಡಿದ್ದೀರಿ, ಇಲ್ಲಿ ನೋಡಿದರೆ ಭಾಷಣ ಮಾಡುತ್ತೀರಿ.

ಡಾ; ಜಿ. ಪರಮೇಶ್ವರ : ನೀವು ಮಾತನಾಡುವಾಗ ಮಾತನಾಡಿ, why do you distrub me ?

(ಗೊಂದಲ)

DR. G. PARAMESHWARA : I am not coming in your way. ಇವತ್ತು 1000 ಕೋಟಿ ರೂಪಾಯಿಗಳನ್ನು ಯಾವ ಸರ್ಕಾರ ಇಲ್ಲಿಯವರೆಗೆ ಕೂಡ ರೈತರಿಗೆ ಮನ್ನಾ ಮಾಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿರಲಿಲ್ಲ. ಅದನ್ನು ಸರ್ಕಾರ ತೆಗೆದುಕೊಂಡಿತು. ಸನ್ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಅವತ್ತು ಅದನ್ನು ತೀರ್ಮಾನ ತೆಗೆದುಕೊಂಡಿತು. ಅದನ್ನು ಯಾರು ವಿರೋಧ ಮಾಡಲಿಲ್ಲ, ಮಾನ್ಯ ಎಸ್.ಎಸ್. ಪಾಟೀಲರೂ ಕೂಡ ಆಗ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಕೇಳಿದರು. ನೀವು ಮನ್ನಾ ಮಾಡಬೇಕೆನ್ನುವ ಮಾತನ್ನೂ ಕೂಡ ಕೇಳಿದಿರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಎಷ್ಟು ಗಂಟೆ ಕರೆಂಟನ್ನು ಕೊಟ್ಟಿದ್ದೀರಿ, ಇಡೀ ಹಳ್ಳಿಗಳನ್ನು ಕತ್ತಲಲ್ಲಿಟ್ಟು ಮನ್ನಾ ಮಾಡಿದ್ದೇವೆಂದು ನೀವು ಭಾಷಣವನ್ನು ಮಾಡುತ್ತೀರಾ ? ಏನು ಮಾಡಿದ್ದೀರಿ ನೀವು ರೈತರನ್ನು ದುಡ್ಡು ಕೇಳುವುದಕ್ಕೆ

what moral right you posses towards this ?ನೀವು ಕರೆಂಟನ್ನು ಕೊಟ್ಟಿದ್ದೀರಾ? ಎರಡು--ಮೂರು ಗಂಟೆ ಕರೆಂಟನ್ನೂ ಸಹ ಕೊಟ್ಟಿಲ್ಲ.

Dr. G. PARAMESWARA : I have not Yielded.ಅವರು ಮಾತನಾಡುವಾಗಲಿ ಮಾತನಾಡಲಿ ಛೇರ್ಮನರೆ.

ಛೇರ್ಮನ್ : ನಿಮಗೆ ಅವಕಾಶವನ್ನು ಕೊಟ್ಟಾಗ ನೀವು ದಯವಿಟ್ಟು ಮಾತನಾಡಿ.

ಡಾ; ಜಿ. ಪರಮೇಶ್ವರ : ಮಾನ್ಯ ಛೇರ್ಮನರೆ, ನಮ್ಮಲ್ಲಿ ನ್ಯೂನತೆ ಇತ್ತು, ತಪ್ಪು ಇತ್ತು, ತಪ್ಪು ಮಾಡಿದ್ದೇವೆ, ಅದನ್ನೆಲ್ಲಾ ನೀವು ಎತ್ತಿ ಹೇಳಬಹುದು, You have every right to do that, Please don't distrub.

(ಗೊಂದಲ)

ಡಾ; ಜಿ. ಪರಮೇಶ್ವರ : ಅವರು ಸುಮ್ಮನೆ ಇರದಿದ್ದರೆ ನನಗೆ ಮಾತನಾಡುವುದಕ್ಕಾಗುವುದಿಲ್ಲ

ಛೇರ್ಮನ್ : ನೀವು ಯಿಲ್ಡ್ ಆಗಬೇಡಿ. ನೀವು ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡಿ ಮುಗಿಸಲಿ. ಮಧ್ಯೆದಲ್ಲಿ ನೀವು ಎದ್ದುನಿಂತುಕೊಂಡರೆ ಅವರು ಮಾತನಾಡುವುದು ಹೇಗೆ ಹೇಳಿ.

ಮಾನ್ಯ ಸದಸ್ಯರು : ಇವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೋ ಅಥವಾ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಏನು ಮಾಡಿದೆ ಅದರ ಮೇಲೆ ಭಾಷಣ ಮಾಡುತ್ತಿದ್ದಾರಾ ?

ಛೇರ್ಮನ್ : ಈಗ ಅವರು ಮಾತನಾಡುತ್ತಿದ್ದಾರೆ.

ಡಾ; ಜಿ. ಪರಮೇಶ್ವರ್ : ಅದನ್ನೇ ಹೇಳುವುದು, ಇನ್ನೇನು ಹೇಳುತ್ತಾರೆ.

ಛೇರ್ಮನ್ : ಏನಾದರೂ ಹೇಳುವುದು ಇದ್ದರೆ, ನೀವು ಮಾತನಾಡುವಾಗ ಹೇಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಮಾನ್ಯ ಛೇರ್ಮನರೆ, ತಾವು ಸರಿಯಾಗಿ ಅವರಿಗೆ ಇನ್ನೊಮ್ಮೆ ಹೇಳಿ, we appeal to you,

ಛೇರ್ಮನ್ : ಅವರಿಗೆ ಅದನ್ನೇ ನಾನು ಹೇಳಿದ್ದೇನೆ, ಕುಳಿತುಕೊಳ್ಳಿ ಎಂದಿದ್ದಕ್ಕಾಗಿ ಅವರು ಕುಳಿತುಕೊಂಡಿದ್ದಾರೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಮಾನ್ಯ ಛೇರ್ಮನರೆ, ಮಾನ್ಯ ರಾಜ್ಯಪಾಲರ ಭಾಷಣವೆಂದರೆ, ಗೌರವಾನ್ವಿತ ಸರ್ಕಾರದ ಮುಖ್ಯಸ್ಥರಾದಂಥವರು ಮಾನ್ಯ ರಾಜ್ಯಪಾಲರು. ಅವರ ಹೇಳಿಕೆಯನ್ನು ನಾವು ಸಮರ್ಥನೆ ಮಾಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಅದನ್ನು ಬಿಟ್ಟು ನೀವು ಡಿಸ್‌ಪ್ಯೂಟ್ ಮಾಡುವುದಿದ್ದರೆ ನಿಮ್ಮ ಭಾಷಣದಲ್ಲಿ ಡಿಸ್‌ಪ್ಯೂಟ್ ಮಾಡಿ, there is nothing wrong ಆದರೆ ಅವರು ಫ್ಯಾಕ್ಟ್ ಹೇಳುತ್ತಿದ್ದಾರೆ.

ಛೇರ್ಮನ್ : ಡಾ; ಜಿ. ಪರಮೇಶ್ವರವರು ಮಾತನಾಡಲಿ ಬಿಡಿ.

ಡಾ; ಜಿ. ಪರಮೇಶ್ವರ ; ಮಾನ್ಯ ಛೇರ್ಮರವರೇ, ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ, ಇವತ್ತು, ಕೂಡ ಸಮ್ಮಿಶ್ರ ಸರ್ಕಾರಕ್ಕೆ ರೈತನ ಹಿತವನ್ನು ರಕ್ಷಣೆ ಮಾಡತಕ್ಕಂಥ ಧ್ಯೇಯೋದ್ದೇಶ ಇದೆ. ಅದಕ್ಕೋಸ್ಕರ ನಾವು ಹೇಳುತ್ತಿದ್ದೇವೆ ಬೇರೆ ಏನೂ ಇಲ್ಲ ಸ್ವಾಮಿ. ಅದನ್ನು ನೀವು ಅರ್ಥ ಮಾಡಿಕೊಳ್ಳಬೇಕು ಅಷ್ಟೆ. ಇಡೀ ದೇಶದಲ್ಲಿ ಒಂದು ಯೋಜನೆಯನ್ನು ನಾವು ತಂದಿದ್ದೇವೆ. ಯಶಸ್ವಿ ಯೋಜನೆಯನ್ನು ತರತಕ್ಕಂಥ ಕೆಲಸವನ್ನು ಪ್ರಪ್ರಥಮಬಾರಿಗೆ ತಂದಿದ್ದೇನೆ. 60 ರೂಪಾಯಿ ಒಬ್ಬ ರೈತ ಕುಟುಂಬ, first time in the world. ಒಂದು ಡಾಲರ್ ಎಂದು ಅಮೇರಿಕಾ ಇದಕ್ಕೆ ತಮಾಷೆಯನ್ನು ಮಾಡಿದರು. Is it possible ಅದರಿಂದ ಅನೇಕ ಜನ ರೈತರು ಸವಲತ್ತನ್ನು ಪಡೆದುಕೊಂಡಿದ್ದಾರೆ. ನಮ್ಮ ಕಾನ್ಸಿಟ್ಯೂಯೆನ್ಸಿಯಲ್ಲಿ ಒಬ್ಬರಿಗೆ ಹೃದಯರೋಗ ಬಂದಾಗ ಅವರಿಗೆ ಅಸ್ಪತ್ರೆಯಲ್ಲಿ ಒಂದೂವರೆ ಲಕ್ಷ ರೂ.ಗಳ ಬಿಲ್‌ನ್ನು ಮಾಡಿದರು, ಅದನ್ನು ಸರ್ಕಾರ ಬರಿಸಿಕೊಟ್ಟಿತು. ಇಂತಹ ಅನೇಕ ವಿಚಾರಗಳು ಇವೆ.

ಮಾನ್ಯ ಸದಸ್ಯರು : ನೂರಾರು ಕೋಟಿ ರೂ.ಗಳನ್ನು ಮಾಡಿ ಕೇವಲ 4-5 ಕೋಟಿ ರೂ.ಗಳ ಬಡವರಿಗೆ ಸೌಲಭ್ಯ ಮಾಡುವುದಾದರೆ ಸರ್ಕಾರಕ್ಕೆ ಲಾಭವೋ ಅಥವಾ ಕೊಟ್ಟಂಥ ರೈತರಿಗೆ ಲಾಭವೋ ಕೇಳಿ.

(ಗೊಂದಲ)

ಡಾ; ಜಿ. ಪರಮೇಶ್ವರ : ಮಾನ್ಯ ಛೇರ್ಮನರೆ, 25 ಲಕ್ಷ ಸಹಕಾರಿ ರೈತರು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇದನ್ನು ತಾವು ಯೋಜನೆ ಮಾಡಬೇಕು, ಇದರಿಂದ ಎಷ್ಟು ರೈತನಿಗೆ ಅನುಕೂಲವಾಗುತ್ತದೆ ಎನ್ನುವ ವಿಚಾರವಾಗಿ; ಮಾನ್ಯ ಶ್ರೀರಾಮರೆಡ್ಡಿಯವರು ಹೊರಗಡೆ ಹೋದರು ಎಂದು ಕಾಣಿಸುತ್ತದೆ. ಬಹಳ ಪ್ರಾಮುಖ್ಯವಾದಂಥ ಇನ್ನೊಂದು ವಿಚಾರ, ಕೃಷಿಗೆ ಹೊಂದಿಕೊಂಡಂತೆ, ಕೈಗಾರಿಕೆಯ ಬಗ್ಗೆ ನಮ್ಮ ರಾಜ್ಯದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೂಡ ತಿಳಿಸಿರುತ್ತೇವೆ. ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳು ಈ ರಾಜ್ಯಕ್ಕೆ ಬರಬೇಕು, ಬಂಡವಾಳ ಹೂಡಬೇಕು ಇಲ್ಲಿ ಹೆಚ್ಚು ಜನರಿಗೆ ಉದ್ಯೋಗ ಸಿಗಬೇಕು ಈ ಎಲ್ಲಾ ಉದ್ದೇಶದಿಂದ ನಾವು, ಇಲ್ಲಿ ಒಂದು ನಾವು ಮಾಡಿಕೊಡಬೇಕು ಎನ್ನುವಂಥ ಮಾತನ್ನು ಹೇಳಿ, ನಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದೇವೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆ, ನಮ್ಮ ರಾಜ್ಯದ ಬೊಕ್ಕಸಕ್ಕೆ ಬರತಕ್ಕಂಥದ್ದು 16.9 ಪರ್ಸೆಂಟ್ ನಮ್ಮ ಟೋಟಲ್ ಇನ್‌ಕಂ ನಲ್ಲಿ ಕೈಗಾರಿಕೆಯಿಂದ ಬರತಕ್ಕದ್ದು. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಇದನ್ನು ಇನ್ನೂ ಹೆಚ್ಚು ಮಾಡಬೇಕು. ಕೃಷಿಕ್ಷೇತ್ರಕ್ಕೆ ಎಷ್ಟು ಪ್ರಾತಿನಿಧ್ಯವನ್ನು ನಮ್ಮ ಸರ್ಕಾರ ಕೊಡಬೇಕಾಗುತ್ತದೆ ಅಷ್ಟೇ ಪ್ರಾತಿನಿಧ್ಯವನ್ನು ಎಷ್ಟು ಪ್ರಾತಿನಿಧ್ಯವನ್ನು ನಮ್ಮ ಸರ್ಕಾರ ಕೊಡಬೇಕಾಗುತ್ತದೆ ಅಷ್ಟೇ ಪ್ರಾತಿನಿಧ್ಯವನ್ನು ಈ ಕೈಗಾರಿಕೆಗಳಿಗೂ ಕೊಡಬೇಕೆಂದು ಹೇಳಿ ನಾವು ಒಂದು ಇಂಡಸ್ಟ್ರೀಯಲ್

ಪಾಲಿಸಿಯನ್ನು ತಂದೆವು. ಮಾನ್ಯ ಮಾಧುಸ್ವಾಮಿಯವರೇ, ತಾವು ಇರುವಾಗ ಕೂಡ ಒಂದು ಇಂಡಸ್ಟ್ರೀಯಲ್ ಪಾಲಿಸಿ ಇತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಂಡಸ್ಟ್ರೀಯಲ್ ಪಾಲಿಸಿಯಲ್ಲಿ ಸಬ್ಸಿಡಿ ಕೊಡದೆ 9 ವರ್ಷಗಳಿಂದ ನಿಮ್ಮ ನಂಬಿಕೊಂಡಿರುವ ಸಣ್ಣ ಕೈಗಾರಿಕೆಗಳವರು ನಿರ್ನಾಮವಾಗಿ ಹೋಗಿದ್ದಾರೆ. ಅವರ ಬಗ್ಗೆ ಕೂಡ ನೀವು ಸ್ವಲ್ಪ ಮಾತನಾಡಿ, ನೀವು ಹೇಳಿದ್ದನ್ನು ಕೇಳುವುದಕ್ಕೆ ನಾವೇನೂ ಹುಡುಗರು ಅಲ್ಲ.

(ಗೊಂದಲ)

ಡಾ; ಜಿ. ಪರಮೇಶ್ವರ : ಅದನ್ನು ನೀವು ಹೇಳಿ ಸ್ವಾಮಿ, ನಾವು ಅದನ್ನು ಏಕೆ ಹೇಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಷ್ಟು ವರ್ಷದಿಂದ ಸಬ್ಸಿಡಿ ಕೊಟ್ಟಿಲ್ಲವೆನ್ನುವುದನ್ನು ಹೇಳಿ ಸ್ವಾಮಿ, ನಿಮ್ಮ 25 ಪರ್ಸೆಂಟ್ ಸಬ್ಸಿಡಿ ಕರ್ನಾಟಕ ಫೈನಾನ್ಸ್ ಕಾರ್ಪೋರೇಷನ್ ಈ ರಾಜ್ಯದಲ್ಲಿ ದಿವಾಳಿ ಎದ್ದು ಹೋಗಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಛೇರ್ಮನರೆ, ಸನ್ಮಾನ್ಯ ಸಿಂಧ್ಯಾರವರು ಮೊನ್ನೆ ಒಂದು ಘೋಷಣೆಯನ್ನು ಮಾಡಿದ್ದಾರೆ. ಸಬ್ಸಿಡಿ ಬೇಗ ರಿಲೀಸ್ ಮಾಡುತ್ತೇನೆಂದು ಹೇಳಿದ್ದಾರೆ. ಕೈಮುಗಿಯುತ್ತೇವೆ. ದಯಮಾಡಿ ಬೇಗ ರಿಲೀಸ್ ಮಾಡಿ ಸ್ವಾಮಿ. ಇಲ್ಲದಿದ್ದರೆ ಕೈಗಾರಿಕೆಗಳು ಮುಚ್ಚಿಹೋಗಿಬಿಡುತ್ತವೆ.

ಡಾ; ಜಿ. ಪರಮೇಶ್ವರ : ಮಾನ್ಯ ಛೇರ್ಮನರೆ, ಆ ಬದಲಾವಣೆಗಳನ್ನು ತರುವುದಕ್ಕೆ ಇವತ್ತು ನಾವು ಸರ್ಕಾರವನ್ನು ರಚನೆ ಮಾಡಿರತಕ್ಕಂಥದ್ದು. ಎಲ್ಲಿ ನ್ಯೂನ್ಯತೆ ಆಗಿದೆ ಅದನ್ನು ಸರಿಪಡಿಸಿಕೊಂಡು ಹೋಗುತ್ತೇವೆ ಎನ್ನುತಕ್ಕಂಥ ಮಾತನ್ನು ಕೇಳುವುದಕ್ಕೆ ನಿಮಗೆ ತಾಳ್ಮೆ ಇಲ್ಲವೆಂದರೆ ಏನು ಮಾಡುವುದು? I am just trying to recepitulate what happened ಮುಂದಕ್ಕೆ ನಾವು ಹೋಗೋಣ. ತಪ್ಪಾಗಿದ್ದರೆ ಮುಂದಕ್ಕೆ ಸರಿಪಡಿಸಿಕೊಂಡು ಹೋಗಬೇಕಾಗುತ್ತದೆ, ಏಕೆಂದರೆ ನಮ್ಮ ರಾಜ್ಯದಲ್ಲಿ ಒಂದೇ ಅಲ್ಲ, ಇಡೀ ಪ್ರಪಂಚದಲ್ಲಿ ಆಗಿದೆ. ಇನ್‌ಫರೇಶನ್ ಟೆಕ್ನಾಲಜಿಯ ರೆವ್‌ಲ್ಯೂಷನ್ ಆದನಂತರ ಇಡೀ ಪ್ರಪಂಚದಲ್ಲಿ ಮ್ಯಾನುಫಾಕ್ಚರಿಂಗ್ ಇಂಡಸ್ಟ್ರೀಸ್ ಕಡಿಮೆಯಾಯಿತು. ನಮ್ಮಲ್ಲಿಯೂ ಆಯಿತು, 24,000 ಜನ ಐಟಿಐನಲ್ಲಿ ಕೆಲಸವನ್ನು ಮಾಡುತ್ತಿದ್ದರು. ಇವತ್ತು ಎಷ್ಟು ಜನ ಇದ್ದಾರೆ ಸ್ವಾಮಿ, ಬಿಇಎಲ್ ನಲ್ಲಿ 12 ರಿಂದ 14 ಸಾವಿರ ಜನ ಕೆಲಸ ಮಾಡುತ್ತಿದ್ದರು. ಇವತ್ತು ಎಷ್ಟು ಸಾವಿರ ಜನ ಇದ್ದಾರೆ ಸ್ವಾಮಿ. These are all winds of change. ಇದನ್ನು ಮಾಧುಸ್ವಾಮಿಯವರೇ ನಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ನೆಹರುರವರು ಇಂಡಸ್ಟ್ರೀಯಲ್ ಪಾಲಿಸಿ ಮಾಡಿದಾಗ ಉದ್ಯೋಗ ಕೊಡುವುದಕ್ಕಾಗಿ ಮಾಡಿದ್ದು

(ಗೊಂದಲ)

ಡಾ; ಜಿ. ಪರಮೇಶ್ವರ : ಮಾನ್ಯ ಛೇರ್ಮನರೆ, ನಾವು ಇಂಡಸ್ಟ್ರೀಯಲ್ ಪಾಲಿಸಿಯನ್ನು ತಂದ ಮೇಲೆ ಹೊಸ ಹೊಸ ಇನ್‌ವೆಸ್ಟಮೆಂಟ್ ನಮ್ಮ ರಾಜ್ಯಕ್ಕೆ ಬರಬೇಕು. ಎಂದು ಹೇಳಿನಾವು ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಎಂದು ಮಾಡಿದೆವು. ಪ್ರಪಂಚದ ಅನೇಕ ಭಾಗಗಳಿಂದ ಎನ್‌ಅರೆನ್ಸಿ (NRIs) ಫಾರೆನ್ ಮಲ್ಟಿನ್ಯಾಷನಲ್ ಕಂಪನಿ ಇವೆಲ್ಲಾ ಕೂಡ ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಬೆಂಗಳೂರಿಗೆ ಬಂಧರು. ಅದರಲ್ಲಿ ಭಾಗವಹಿಸಿದರು, ಇಲ್ಲಿರತಕ್ಕಂಥ ಕೈಗಾರಿಕೆಯ ವಾತಾವರಣವನ್ನು ನೋಡಿ ಸಾವಿರಾರು ಕೋಟಿ ರೂಪಾಯಿಗಳ ಇನ್‌ವೆಸ್ಟಮೆಂಟ್ ನಮ್ಮ ರಾಜ್ಯಕ್ಕೆ ಬರತಕ್ಕಂಥ ವ್ಯವಸ್ಥೆಯಾಯಿತು. 2002-03 ರಲ್ಲಿ 6 ಮೆಗಾಪ್ರಾಜೆಕ್ಟ್ಸ್ ಬಂತು, ಅದರ ಟೋಟಲ್ ಇನ್‌ವೆಸ್ಟ್‌ಮೆಂಟ್ 1079 ಕೋಟಿ ರೂ.ಗಳು ಇದು ಬರೀ ಒಂದು ವರ್ಷದಲ್ಲಿ, ಅದು ಆದಮೇಲೆ, ನಲ್ಲಿ ಸುಮಾರು 1660 ಕೋಟಿ ರೂ.ಗಳು ಇನ್‌ವೆಸ್ಟ್‌ಮೆಂಟ್ ಬಂತು, ಇದು ಎರಡೂ ಸೇರಿ ಸುಮಾರು 40,000 ಉದ್ಯೋಗ ನಮ್ಮ ರಾಜ್ಯದಲ್ಲಿ ಸೃಷ್ಟಿಯಾಗತಕ್ಕಂಥದ್ದು ಆಯಿತು. ಇವತ್ತು ನಾನು ತಮಗೆ ಹೇಳುತ್ತೇನ, ಎಷ್ಟು ಉದ್ಯೋಗ ಸೃಷ್ಟಿಯಾಯಿತು 2000-01 ವರೆಗೆ ನಮ್ಮ ಈ ಅವಧಿಯಲ್ಲಿ 93,845 ಯೂನಿಟ್ಸ್ ಆಯಿತು. ಅಂದರೆ small to big units ಸ್ಮಾಲ್ ಸ್ಕೇಲ್ ಇಂಡಸ್ಟ್ರೀಯಲ್ಲಿ 4 ಲಕ್ಷದ 44 ಸಾವಿರಾ ಎಂಪ್ಲಾಯಿಮೆಂಟ್ ಜನರೇಟ್ ಅಂದರೆ ಆಯಿತು ಎನ್ನತಕ್ಕಂತಹದ್ದು, ಆದ್ದರಿಂದ ಇದು ರಾಜ್ಯದ ದೃಷ್ಟಿಯಿಂದ ಬೆಳವಣಿಗೆಯಾಗಲಿಲ್ಲವೇ ?

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಛೇರ್ಮನ್‌ರವರೆ, ನಾನು ನಿನ್ನೆಯೂ ಅದರ ಬಗ್ಗೆ ಹೇಳಿದೆ, ಕೆಲವು ಸಲ ನಾವು ಪಕ್ಷಗಳ ನಿರ್ಬಂಧಗಳಿಗೆ ಸರ್ಕಾರವನ್ನು ಸಮರ್ಥಿಸಿಕೊಳ್ಳುವಂತಹ ಕೆಲಸವನ್ನು ಮಾಡುವುದು ಹೌದು. ಕೆಲವು ಮೂಲಭೂತವಾದಂತಹ ವಿಚಾರಗಳ ಬಗ್ಗೆ ಮಾತನಾಡುವಾಗ ಈ ದೇಶದ ಪ್ರಜೆಗಳು ನಾವು ಎಂಬುದನ್ನು ಜ್ಞಾಪಕದಲ್ಲಿಟ್ಟು ಕೊಂಡು ನಾವು ಕೆಲಸ ಮಾತುಗಳನ್ನು ಆಡಬೇಕಾಗುತ್ತದೆ. ಈ ದೇಶದ ಬಹಳ ದೊಡ್ಡ ಆಸ್ತಿ ಮತ್ತು ಶಾಪ ಎರಡೂ ಕೂಡ ಮ್ಯಾನ್‌ರವರ್. ಮಾನವಶಕಿ, ನೀವು 40 ಸಾವಿರ ಉದ್ಯೋಗ ಸೃಷ್ಟಿಯಾಯಿತು ಎಂದು ಹೇಳಿದ್ದೀರಿ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದಷ್ಟೆ ನಮ್ಮಲ್ಲಿ ಬಳಕೆ ಆಗದಿರಕ್ಕಂತಹ ಮ್ಯಾನ್ ಪವರ್ ಆನ್ ಯೂಬಿರೈಸ್ಡ್ ಮ್ಯಾನ್‌ರವರೆ ಅದನ್ನು ತೊಡಗಿಸಿಕೊಳ್ಳುವುದರಲ್ಲಿ ಈಗ ಏನಾದರೂ ಪ್ರಯಾಣ ಮಾಡಿದ್ದೇವಾ ? ಎಂದಾಗ The answer is very disappointing. ಅದಕ್ಕಾಗಿ ಈ ಸರ್ಕಾರ ಆ ಸರ್ಕಾರ ಆ ಪಾರ್ಟಿ ಈ ಪಾರ್ಟಿಯ ಪ್ರಶ್ನೆಯಲ್ಲಾ. That is the Problem of this country ಎಲ್ಲಿಯವರೆಗೆ ನಾವು ಬಳಕೆಯಾಗಿದೆ ಇರತಕ್ಕಂತಹ ಮಾನವ ಶಕ್ತಿ ಏನಿದೆ, ಅದನ್ನು ಉಪಯೋಗಕ್ಕೆ ತೆಗೆದುಕೊಳ್ಳುವುದಿಲ್ಲ, ಅಲ್ಲಿಯವರೆಗೆ ಈ ದೇಶದಲ್ಲಿ ಶಾಂತಿ ಮತ್ತು ಪ್ರಗತಿ ಇವರೆಡೂ ಸಾಧ್ಯವಾಗುವುದಿಲ್ಲ.

ಈ ಅಸಮಾನತೆಯೂ ಹೀಗೆಯೇ ಇರುತ್ತದೆ. The biggest bane of this country is utilised manpower, The neighbouring country china. they are progressive because they have been able to put into use maximum manpower. ಸ್ವಲ್ಪ ಆ ಕಡೆಗೂ ಒಂದು ಚೂರು ಏನಾದರೂ ಆಗಿದೆಯಾ ಅಂತ ಇದ್ದರೆ ಸ್ವಲ್ಪ ಕೈಂಡಲಿ ಎನ್‌ಲೈಟ್ ಮಾಡಿ.

ಡಾ; ಜಿ. ಪರಮೇಶ್ವರ (ಮಧುಗಿರಿ) : ಮಾನ್ಯ ಛೇರ್ಮನ್‌ರವರೆ, This isa subject of national, debate. ಏಕೆಂದರೆ, ನಾವು ಇವತ್ತು ಕರ್ನಾಟಕ ರಾಜ್ಯದಲ್ಲಿ ಮಾತ್ರ ಒಂದು- ಇಂಡಸ್ಟ್ರೀ ಮಾಡಿದ ತಕ್ಷಣ ಇಡೀ ದೇಶದ ಇಡೀ ಕರ್ನಾಟಕಲ್ಲಿರತಕ್ಕಂತಹ ಎಲ್ಲಾ ಹ್ಯೂಮನ್ ರಿಸೋರ್ಸ್‌ಸ್ ನಾವು 4–5 ವರ್ಷಗಳಲ್ಲಿ ಉಪಯೋಗ ಮಾಡಿಬಿಡುತ್ತೇವೆ ಎನ್ನುತಕ್ಕಂತಹ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಹ್ಯೂಮನ್ ರಿಸ್ಟೋರ್ಸ್‌ಸ್ ಬಗ್ಗೆ ಲೆಕ್ಕ ಹಾಕಿದರೆ ನಾವು ಇನ್ನೂ ಕೂಡ ಬಹಳ ಕಡಿಮೆಯಲ್ಲಿದ್ದೇವೆ.

ಛೇರ್ಮನ್ : ಡಾ. ಪರಮೇಶ್ವರ್‌ರೇವರೆ, ಅದರೊಟ್ಟಿಗೆ ತಾವು ಇನ್ನೊಂದು ಫಿಗರೆನ್ನು ಕೊಡಿ. ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನಲ್ಲಿ ನಾಲೇಜ್‌ಗೋಸ್ಕರ ಎಷ್ಟು ಎಂ.ಓ.ಯೂಜೈನ್ ಮಾಡಿದೆ. ಎಷ್ಟು ಇನ್‌ವೆಸ್ಟ್‌ಮೆಂಟ್ ಬಂದಿದೆ, ಅದರ ಬಗ್ಗೆ ಸದನಕ್ಕೆ ಮಾಹಿತಿ ಕೊಟ್ಟಿದ್ದರೆ ಒಳ್ಳೆಯದಾಗುತ್ತದೆ. 4 ಲಕ್ಷದ 44 ಸಾವಿರ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ, ಅಕ್ಟ್ಯುಯಲ್ ಆಗಿ ಅದು ಜನರೇಟ್ ಆಗಿದೆಯಾ ಅಥವಾ ಅದು ಬುಕ್ ಫಿಗರಾ ?

ಡಾ; ಜಿ. ಪರಮೇಶ್ವರ್ : ಅದರ ಬಗ್ಗೆ ಸಂಬಂಧಪಟ್ಟಂತಹ ಸಚಿವರು ಇದ್ದಾರೆ. ಆ ಬಗ್ಗೆ ಡಿಟೇಲ್ ಮಾಹಿತಿ ನನ್ನ ಹತ್ತಿರ ಇಲ್ಲ. ಆ ಬಗ್ಗೆ ಡಿಟೇಲ್ಸ್‌ನ್ನು ಅವರು ಕೊಡುತ್ತಾರೆ. ಆದರೆ ನಾನು ಓವರ್ ಆಲ್ ಒಂದು ರಿವ್ಯೂ ಮಾದರಿಯಾಗಿ ನಾನು ಹೇಳತಕ್ಕಂತಹ ವಿಚಾರ, ಏಕೆಂದರೆ, ಯಾವ ರೀತಿಯಾಗಿ ನಮ್ಮ ಬೆಳವಣಿಗೆಯಾಯಿತು ? ಎಲ್ಲಿ ನಾವು ಬ್ಯಾಲಿನ್ಸ್ ಆಫ್ ಎಕಾನಾಮಿ ಮಾಡುವುದಕ್ಕೆ ಸಾಧ್ಯವಾಯಿತು ಎಂಬ ದೃಷ್ಟಿಯಿಂದ ಮಾತ್ರ ಅಷ್ಟೇ ನಾನು ಸ್ಥೀಮಿತವಾಗುತ್ತೇನೆ. ಅರ್ಥಿಕ ವ್ಯವಸ್ಥೆಯ ಬಗ್ಗೆ ಒಂದು ಪಕ್ಷಿನೋಟವನ್ನು ಮಾಡಬೇಕೆಂದು ಮುಂಥೆ ಹೋಗುವಂಥಹ ದೃಷ್ಟಿಯಿಂದ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ನಮಗೆ ಇಲ್ಲಿ ಅನುಕೂಲವಾಯಿತು. ಇನ್ನೇಲ್ಲೋ ಕೂಡ ನೆಗಟೀವ ಗ್ರೋಪ್ ಆಯಿತು, ಅದಕ್ಕಾಗಿ ನಾನು ಹೇಳಿದ್ದು. 6.8 ಬಿಡಿಪಿ ಪರ್ಸೆಂಟ್ ಗ್ರೋಪ್ ಆಯಿತು ಎಂದು ಹೇಳುವಾಗ ಯಾವ ಯಾವ ಕ್ಷೇತ್ರದಲ್ಲಿ ನಮಗೆ ನೆಗೆಟೀವ್ ಗ್ರೋಪ್ ಆಯಿತು, ಯಾವ ಯಾವ ಕ್ಷೇತ್ರದಲ್ಲಿ ಪಾಸಿಟೀವ್ ಗ್ರೋಪ್ ಆಯಿತು How we were able to manage the economy and stood second in the country in maintaining the economy ಎನ್ನುವಂತಹ ಮಾತನ್ನು ನಾನು ತಮಗೆ ಹಾಗೂ ಈ ಸದನಕ್ಕೆ ತಿಳಿಸುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಇದರಲ್ಲಿ ಬಹಳಷ್ಟು ಜನರು

ಕರ್ನಾಟಕಕ್ಕೆ ಬಂದರು. ಬಹಳ ಒಳ್ಳೆಯ ಉತ್ತಮವಾದಂತಹ ವಾತಾವರಣವಿದೆ, ಒಳ್ಳೆಯ ಆಡಳಿತ ವ್ಯವಸ್ಥೆ ಇದೆ, ಒಳ್ಳೆಯ ಇನ್‌ಪ್ರಾಸ್ಟ್ರಕ್ಚರ್ ಫೆಸಿಲಿಟಿಸ್‌ನ್ನು ಕೊಡತಕ್ಕಂತಹ ವ್ಯವಸ್ಥೆ ಇದೆ. ಇದಕ್ಕಾಗಿ ಇಲ್ಲಿ ಬರಬೇಕೆಂದು ಹೇಳಿ ನಾನು ಕಾಂಪಿಟೇಷನ್ between Andra Pradesh, which is also one of the leading states at that point of time and Maharashtra, again another leading state Madhya Pradesh ಇಷ್ಟೆಲ್ಲದರಲ್ಲಿಯೂ ಕೂಡ ಕರ್ನಾಟಕಕ್ಕೆ ಬರತಕ್ಕಂಥಹದ್ದು. ಒಂದು ಸಂದರ್ಭದಲ್ಲಿ ಮಾನ್ಯ ಛೇರ್ಮನ್‌ರವರೆ, ಯಾವುದೇ ಅಧ್ಯಕ್ಷರಾಗಲಿ, ಯಾವುದೇ ಪ್ರಧಾನಮಂತ್ರಿಯಾಗಲಿ, ಯಾವುದೇ ರಾಷ್ಟ್ರದ್ದು, ಅವರುಗಳೆಲ್ಲರೂ ಇಂಡಿಯಾಕ್ಕೆ ಬಂದರೆ ಅವರುಗಳು ಬೆಂಗಳೂರಿಗೆ ಫಸ್ಟ್ ಬಂದು ದೆಹಲಿಗೆ ಹೋಗುತ್ತಿದ್ದರು. ಅದರ ಬಗ್ಗೆ ನಾವುಗಳೆಲ್ಲರೂ ಕೇಳಿದ್ದೇವೆ. ಏತಕ್ಕೆ ? ಕರ್ನಾಟಕದ ಬೆಂಗಳೂರಿನಲ್ಲಿ ಏನೋ ಒಂದು ಸ್ಪೆಷಾಲಿಟಿ ಇದೆ, ವಾಟಾಳ್ ನಾಗರಾಜುರವರು ಇದ್ದಾರೆ, ಪರಮೇಶ್ವರ್‌ರವರು ಇದ್ದಾರೆ ಎನ್ನುವಂತಹದ್ದಲ್ಲ. ಇಲ್ಲಿ ಒಂದು ಒಳ್ಳೆಯ ವಾತಾವರಣವಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿ ಒಳ್ಳೆಯ ಮೈನ್ಸ್‌ಗಳು ಇವೆ, ಪುಕಸಟ್ಟೆಯಾಗಿ ಸಿಗುತ್ತವೆ ಎಂದು ಅವರುಗಳು ಬಂದಿದ್ದಾರೆ. ಅವುಗಳೆಲ್ಲವೂ ಲೂಟಿಯಾಗಿಬಿಟ್ಟಿದೆ. ಮೈನ್ಸ್ ಲೂಟಿಯಾಗಿ ಅದರ ಬಗ್ಗೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಇವತ್ತು ಲೂಟಿಯಾಗಿಹೋಗಿದೆ. ಕರ್ನಾಟಕದಲ್ಲಿ ಎಲ್ಲಾ ಕಾರ್ಖಾನೆಗಳನ್ನು ಮುಚ್ಚಿದ್ದೀರಿ, ಸುಮ್ಮನೆ ಬಡಾಯಿಕೊಚ್ಚಿಕೊಳ್ಳುವುದಕ್ಕೆ ನೀವು ಹೋಗಬೇಡಿ. ಏನೆಂದರೆ ಏನೂ ಇಲ್ಲ. ಸುಮ್ಮನೆ ನೀವು ಮಾತನಾಡುತ್ತಿದ್ದೀರಿ.

ಡಾ; ಜಿ. ಪರಮೇಶ್ವರ್ : ನೀವು ಏತಕ್ಕಾಗಿ ನಮ್ಮನ್ನು ಸುಮ್ಮನೆ ಮಾತನಾಡುತ್ತೀರಿ ಅಂದರೆ ಹೇಗೆ ?

ಶ್ರೀ ಜೆ.ಸಿ. ಮಾಧುಸ್ವಾಮಿ : 65 ರೂ ಟನ್ ಇದ್ದದ್ದು ಐರನ್‌ಓರ್ ಅದೇ 100 ರೂಪಾಯಿ ಆಗಿದೆ.

(ಗೊಂದಲ)

Dr. G. PARAMESHWARA : This is a very serious charge.

ಶ್ರೀ ವಾಟಾಳ್ ನಾಗರಾಜ್ : ಮೈಸೂರು ಲ್ಯಾಂಪ್ ಕಾರ್ಖಾನೆ ಮುಚ್ಚಿ ಆಯಿತು, ನೂತನ ವಿದ್ಯುತ್ ಕಾರ್ಖಾನೆ ಮುಚ್ಚಿಯಾಯಿತು, ಎಲ್ಲಾ ಕಡೆಗಳಲ್ಲೂ ಕಾರ್ಖಾನೆಗಳನ್ನು ಮುಚ್ಚಿ ಲಕ್ಷಾಂತರ ಜನ ಕಾರ್ಮಿಕರು ಬೀದಿ ಪಾಲಾಗಿದ್ದರೆ. ಏನು ನನಗೆ ಅರ್ಥವಾಗುತ್ತಿಲ್ಲ. ಏನು ತಾವು ಹೇಳುತ್ತಿರುವುದು ?

ಶ್ರೀ ಅರಗ ಜ್ಞಾನೇಂದ್ರ : ಡಾ; ಪರಮೇಶ್ವರ್‌ರವರಿಗೆ ಗೊತ್ತಿದ್ದರೂ ಕೂಡ ಅವರು ಒಬ್ಬ ಆಡಳಿತ ಪಕ್ಷದ ಶಾಸಕರಾಗಿ ಬಹಳ ಚೆನ್ನಾಗಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಏನೆಂದರೆ, ಅವರಿಗೆ ಆತ್ಮವಂಚನೆಯಾಗುತ್ತಿದೆ ಅಷ್ಟೆ.

ಡಾ; ಜಿ. ಪರಮೇಶ್ವರ್ : ನಾನು ನಿಂತಿರುವುದು ಸುಮ್ಮನೆ ಮಾತನಾಡುವುದಕ್ಕೆ. ಅಥವಾ ಏನೋ ಹೇಳುವುದಕ್ಕೆ ಅಂದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್ : ಸುಮ್ಮನೆ ಇಷ್ಟೆಲ್ಲಾ ಗೊತ್ತಿದ್ದರೂ ಸರ್ಕಾರದ ಪರವಾಗಿ ಮಾತನಾಡುವಾಗ ನಿಮ್ಮ ಭಾಷೆ, ನಿಮ್ಮ ಭಾಷಣ, ನಿಮ್ಮ ಮಾತುಗಳು ಬೇರೇ ತಾನೇ ?

ಡಾ; ಜಿ. ಪರಮೇಶ್ವರ್ : ಇನ್ನೂ ಯಾವ ತರಹ ಇರಬೇಕು ?

ಶ್ರೀ ವಾಟಾಳ್ ನಾಗರಾಜ್ : ನೈಜ ಸ್ಥಿತಿ, ತಾವು ಪಾಪ ಪ್ರಾಮಾಣಿಕವಾಗಿ ಮಾತನಾಡತಕ್ಕಂತಹದ್ದರಲ್ಲಿ ನೈಜ ಸ್ಥಿತಿ ಇರಲಿ, ಈಗ ತಮಗೆ ಗೊತ್ತಿದೆ, ಎಷ್ಟು ಕಾರ್ಖಾನೆಗಳು ಮುಚ್ಚಿದೆ ಬೆಂಗಳೂರಿನಲ್ಲಿ ಅಂಕಿಅಂಶಗಳ ಪ್ರಕಾರ ಹೇಳಿ. ಎಷ್ಟು ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ, ಕರ್ನಾಟಕದಲ್ಲಿ ಎಷ್ಟು ಕಾರ್ಖಾನೆಗಳು ಇವೆ, ಸಣ್ಣ ಕಾರ್ಖಾನೆಗಳ ಗತಿ ಏನು ? ಅದರ ಬಗ್ಗೆ ತಾವು ಏನಾದರೂ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಹಿರಿಯ ಸದಸ್ಯರಾದಂತಹ ವಾಟಾಳ್ ನಾಗರಾಜ್‌ರವರು ದುರ್ದೈವಶಾತ್ ಇಲ್ಲಿ ಬರುವಂತಹ ಪ್ರಸಂಗ ಬರಲಿಲ್ಲ. ಅವರು ಇಲ್ಲಿಗೆ ಬಂದಿದ್ದಾರೆ ಏನು ಮಾಡುತ್ತಿದ್ದರೋ ಅದನ್ನು ನಾವು ನೋಡಬೇಕಾಗಿತ್ತು. ಬರೀ ಅವರು ಅಲ್ಲಿಯೇ ಕುಳಿತುಕೊಳ್ಳುವುದು ಬಂದಿದೆ, ಅಷ್ಟೇ ಕೊಟ್ಟುಬಿಟ್ಟಿದ್ದಾರೆ.

ಛೇರ್ಮನ್ : ನಾನು ಉತ್ತರವನ್ನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸಮ್ಮಿಶ್ರ ಸರ್ಕಾರದಲ್ಲೂ ಕೂಡ ಬರುವಂತಹ ಅವಕಾಶ ತಮಗೆ ಬರುವುದಿಲ್ಲ. ಏನು ಮಾಡುವುದು ?

ಶ್ರೀ ವಾಟಾಳ್ ನಾಗರಾಜ್ : ನನ್ನ ಮಾತು ಇರಲಿ, ಅವರೇ ಮಂತ್ರಿಗಳಾಗುವುದಕ್ಕೆ ಭಾರಿ ಹಿಮಾಲಯ ಪರ್ವತದಂತೆ ನಿಂತುಕೊಂಡಿದ್ದಾರೆ. ನನಗೆಲ್ಲಿ ಮಂತ್ರಿ ಪದವಿ ಸಿಕ್ಕುವುದು ? ಅದು ಸಾಧ್ಯವೇ ಇಲ್ಲ, ನಿಮಗೆ ಬೇಕಾದಷ್ಟು ಮಂತ್ರಿ ಕೆಲಸ ಆಗಬೇಕು ಅಂತ ಕಿತ್ತಾಡುತ್ತಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳಿಗೆ ಇನ್ನೂ ಮಂತ್ರಿಮಂಡಲವನ್ನು ರಚನೆ ಮಾಡುವುದಕ್ಕೆ ಆಗುತ್ತಾ ಇಲ್ಲ, ಪರಿಸ್ಥಿತಿ ಏನೆಂದರೆ, ಅವರಿಗೆ ಒತ್ತಡಗಳು ಜಾಸ್ತಿಯಾಗಿದೆ ಆ ಒತ್ತಡದಿಂದ ಯಾರನ್ನು ಮಾಡಬೇಕು, ಯಾರನ್ನು ಬಿಡಬೇಕು ಅಂತಹದ್ದರಲ್ಲಿ ನನ್ನನ್ನು ಮಂತ್ರಿ ಮಾಡುವುದಕ್ಕೆ ಆಗುತ್ತದೆಯೇ ? ಮಾನ್ಯ ಸಿಂಧ್ಯಾರವರೇ ? ನೀವು ಯಾವತ್ತಾದರೂ ಬಿಟ್ಟುಕೊಡುತ್ತೀರಾ ? ಅದು ಸಾಧ್ಯವೇ ? ಮಂತ್ರಿಯಾಗುವುದರಲ್ಲಿ ನಾವು ಸಿಂಧ್ಯಾರವರನ್ನು ನೋಡಿಕೊಂಡು ಬಹಳ ಕಲಿಯಬೇಕು.

ಮಾನ್ಯ ಸದಸ್ಯರು : ನೀವು ಬಂದರೆ ನಿಮ್ಮನು ಮಂತ್ರಿ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಕೈಗಾರಿಕಾ ಸಚಿವರು) : ಬಹಳ ಗಂಭೀರವಾಗಿ ಹೇಳುತ್ತಿದ್ದಾರೆ. ವಾಟಾಳ್ ನಾಗರಾಜ್‌ರವರು ಖಂಡಿತವಾಗಿ ಮಂತ್ರಿಗಳಾಗಬೇಕೆಂದು ಬಯಸಿದರೆ ಅವರನ್ನು ಮಂತ್ರಿಗಳಾಗಿ ನಾವು ಮಾಡುತ್ತೇವೆ. ಅದರಲ್ಲಿ ಎರಡನೇ ಮಾತೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ ; ನಾನು ಈಗ ತಯಾರಾಗಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನಾನು ಮಂತ್ರಿಯಾಗುವುದಕ್ಕೆ ತಯಾರಿದ್ದೇನೆ, ನನಗೆ ಯಾವುದೇ ಇಲಾಖೆಯನ್ನು ಕೊಟ್ಟರೂ ಕೂಡ ಚಿಂತೆಯಿಲ್ಲ, ತಯಾರಾಗಿದ್ದೇನೆ. ಬರಲಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬನ್ನಿ ನಾವು ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಯಾರಾಗಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಹೇಳುವುದರ ಬಗ್ಗೆ ಇನ್ನೂ ಮುಗಿಸಿಲ್ಲ. ಅವರು ಕೇಳಲೇ ಇಲ್ಲ.

ಛೇರ್ಮನ್ : ಅವರು ಸಂಪೂರ್ಣವಾಗಿ ಮುಗಿಸಲಿ, ಅನಂತರ ಹೇಳಿ. ಮಾನ್ಯ ಸಿಂಧ್ಯಾರವರು ಮಾತನಾಡುವುದನ್ನು ಕಂಪ್ಲೀಟ್ ಮಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಕಳೆದ 5 ವರ್ಷಗಳ ಕಾಲ ವಿರೋಧದ ಕಡೆ ಕುಳಿತಿದ್ದವನು. ಆಕಸ್ಮಿಕವಾಗಿ ನಾವು ಈಗ ಈ ಕಡೆಗೆ ಬಂದಿರುತ್ತೇವೆ. ಮಾನ್ಯ ವಾಟಾಳ್ ನಾಗರಾಜ್‌ರವರ ಗೈರು ಹಾಜರಿಯನ್ನು ನಾವು ತೀವ್ರವಾಗಿ ಮನಸ್ಸಿನಲ್ಲಿ ನೊಂದಿದ್ದವರು. ಮಾನ್ಯ ರಮೇಶ್‌ಕುಮಾರ್‌ರವರು, ವಾಟಾಳ್ ನಾಗರಾಜ್‌ರವರು. ಹೆಚ್.ಎನ್. ನಂಜೇಗೌಡರು, ಯಡಿಯೂರಪ್ಪನವರು ಇಂತಹವೆಲ್ಲರೂ ಸೋಲಬಾರದಾಗಿತ್ತು ಎಂದು ಹೇಳಿ ನಾನು ವಿರೋಧ ಪಕ್ಷದ ಕಡೆ ನಿಂತಾಗ ಸದನದಲ್ಲಿ ಹೇಳಿದ್ದೇನೆ. ನೀವು ಮಂತ್ರಿಗಳಿಗಿಂತ ಹೆಚ್ಚಾಗಿ ದೊಡ್ಡ ಸ್ಥಾನದಲ್ಲಿದ್ದೀರಿ ಈಗ ಈ ಸಭೆಗೇ ಒಂದು ದೊಡ್ಡ ಗೌರವ ಬಂದಿದೆ.

ಶ್ರೀ ಅರಗ ಜ್ಞಾನೇಂದ್ರ : ಇದು ಈಗ ಅಪಾಯ ಸಾರ್. ಈಗ ಅವರು ವಾಪಸ್ಸು ಹೋಗುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರ ಕೈಯಲ್ಲಿ ನನ್ನನ್ನು ಮಂತ್ರಿ ಮಾಡುವುದಕ್ಕೆ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ವಾಟಾಳ್ ನಾಗರಾಜ್‌ರವರು ಎಲ್ಲಿದ್ದರೂ ಸಹಿತ ಅವರು ವಾಟಾಳ್ ನಾಗರಾಜೇ ?

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಹೇಳಿದಿರಿ, ಅವರು ಬರುವುದಕ್ಕೆ ತಯಾರಿದ್ದರೆ ಮಂತ್ರಿ ಮಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ವಾಟಾಳ್ ನಾಗರಾಜ್‌ರವರು ನಾನು ಬರುವುದಕ್ಕೆ ತಯಾರಿದ್ದೇನೆ ಎಂದು ಹೇಳಿ ಹೊರಟೇಬಿಟ್ಟರು. ಅವರಿಗೆ ಯಾವ ಇಲಾಖೆಯನ್ನು ಕೊಡುತ್ತೀರೆಂದು ಹೇಳಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಅವರು ಈ ಕಡೆಗೆ ಬಂದರೆ ಖಂಡಿತವಾಗಿ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕೈಗಾರಿಕೆಯ ವಿಚಾರದಲ್ಲಿ ನಮ್ಮ ಜ್ಞಾನೇಂದ್ರರವರು ಮತ್ತು ವಾಟಾಳ್ ನಾಗರಾಜ್‌ರವರು ಮತ್ತು ಮಾಧುಸ್ವಾಮಿಯವರು ಬಹಳ

ಗಂಭೀರವಾಗಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಡಾ; ಜಿ. ಪರಮೇಶ್ವರ್‌ರವರು, ಮಾನ್ಯ ಈಶ್ವರಪ್ಪನವರು ಬಹಳ ಪ್ರಮುಖವಾಗಿ ಸಣ್ಣ ಕೈಗಾರಿಕೆಗಳ ಸಚಿವರಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ, ಅದಕ್ಕೋಸ್ಕರವಾಗಿ ಇದರ ಬಗ್ಗೆ ಏನಾದರೊಂದು ಪರಿಹಾರವನ್ನು ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಬಹಳ ಗಂಭೀರವಾಗಿರತಕ್ಕಂತಹ ವಿಚಾರವನ್ನು ಎತ್ತಿದ್ದಾರೆ. ಮೈಸೂರು ಲ್ಯಾಂಪ್ಸ್‌ನ್ನು ಮುಚ್ಚಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದೀರಿ ಮತ್ತು ಎನ್.ಜಿ.ಎಫ್. ಫ್ಯಾಕ್ಟರಿಯನ್ನು ಸಹಿತ ಮುಚ್ಚಿದ್ದಾರೆ ಎನ್ನತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದ್ದೀರಿ. ಈಗ ಉಳಿದಿರತಕ್ಕಂಥ ಕೆಲವು ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಎಂಇಐ ಇರಬಹುದು ಸೋಪ್ಸ ಅಂಡ್ ಡಿಟರ್‌ಜೆಂಟ್ಸ್ ಇರಬಹುದು ಮತ್ತು ಒಂದೊಂದು ಕಾರ್ಖಾನೆ ಎಂದು ತೆಗೆದುಕೊಂಡು ನಾಲ್ಕೈದು ದಿನಗಳಿಗಂದ ರಿವ್ಯೂ ಮಾಡುತ್ತಿದ್ದೇನೆ. ನನ್ನ ಗಮನಕ್ಕೆ ಬಂದಿರುವ ಹಾಗೆ ಇವತ್ತು ಸಾರ್ವಜನಿಕ ವಯಲದಲ್ಲಿರತಕ್ಕಂಥ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಏನಿವೆ. ಅವುಗಳನ್ನು ನಾನು ಯಾವುದೇ ಕರಣದಿಂದ ಮುಚ್ಚಲಿಕ್ಕೆ ಬಿಡುವುದಿಲ್ಲ. ಇದು ನಮ್ಮ ಪಕ್ಷದ ನೀತಿ, ನಮ್ಮ ಸರ್ಕಾರದ ನೀತಿ, ಮತ್ತು ನಮ್ಮ ಸಮ್ಮಿಶ್ರ ಸರ್ಕಾರದ ನೀತಿಯಾಗಿದೆ. ತಾವು ದಯವಿಟ್ಟು ಕೇಳಬೇಕು. ಏಕೆಂದರೆ ನಾವೂ ಕೂಡ ಆ ಕಡೆ ಇದ್ದು ಕಾರ್ಮಿಕರ ಕಷ್ಟ ಸುಖಗಳನ್ನು ತಿಳಿದುಕೊಂಡಿರತಕ್ಕವರು. ನಾನು ಖಚಿತವಾದ ಮಾತನ್ನು ಹೇಳುತ್ತಿದ್ದೇನೆ. ನಾನು ಸಚಿವಸಂಪುಟದ ಮುಂದೆ ಸಹಿತ ಈ ವಿಚಾರವನ್ನು ತೆಗೆದುಕೊಂಡು ಹೋಗುತ್ತೇನೆ. ಯಾವುದು ಕ್ಲೋಸ್ಡ್ ಡೌನ್ ಫ್ಯಾಕ್ಟರಿಗಳು ಇವೆ, ಅದಕ್ಕೆ ಬಹುಶಃ ನಾನು ಏನೂ ಸಹಾಯ ಮಾಡುವುದಕ್ಕೆ ಆಗದೇ ಇರಬಹುದು. ಆದರೆ ಕ್ಲೋಸ್ ಮಾಡಬೇಕೆಂದು ಇವೆಯಲ್ಲಾ ನಾನು ಆದಷ್ಟು ಅವುಗಳಿಗೆ ಜೀವ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎನ್ನತಕ್ಕಂಥ ಮಾಶನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಡಾ; ಪರಮೇಶ್ವರ್ ಅವರು ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡುತ್ತಾ...

ಶ್ರೀ ಜೆ.ಸಿ. ಮಾಧುಸ್ವಾಮಿ : ಸಬ್ಸಿಡಿ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನ್ನ ಮಾತನ್ನು ಕೇಳುವುದಕ್ಕೆ ನೀವು ತಯಾರಿಲ್ಲವಲ್ಲಾ ನಿಮ್ಮ ಎದುರೇ ನಾನು ಹೇಳಿದ್ದೇನೆ. ಡಾ; ಪರಮೇಶ್ವರ್ ಅವರು ಬಹಳ ಚೆನ್ನಾಗಿ ವಂದನಾ ನಿರ್ಣಯದ ಬಗ್ಗೆ ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಏನೊಂದು ಇನ್ವೆಸ್ಟರ್ ಮೀಟ್ ಆಯಿತು. ಅದು ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ ಇರಬಹುದು. ಬೇರೆ ಬೇರೆಯಲ್ಲಿ ನ್ಯಾಷನಲ್ ಕಂಪನಿಗಳ ಇನ್ವೆಸ್ಟರ್ಸ್ ಮೀಟ್ ಇರಬಹುದು. ಮಾನ್ಯ ರಮೇಶ್ ಕುಮಾರ್ ಅವರು ಎತ್ತಿರತಕ್ಕಂಥ ಸೈದ್ಧಾಂತಿಕವಾದ ವಿಚಾರದಲ್ಲಿ ಎಷ್ಟು ಜನರಿಗೆ ಇದರಿಂದ ಉದ್ಯೋಗಾವಕಾಶ ಸಿಕ್ಕಿದೆ ಎನ್ನತಕ್ಕಂಥಾದ್ದು ಒಂದು ಭಾಗ. ಎಷ್ಟು ಇನ್ವೆಸ್ಟ್‌ಮೆಂಟ್ ಆಗಿದೆ ಎನ್ನತಕ್ಕಂಥಾದ್ದು ಮತ್ತೊಂದು ಭಾಗ. ಎಷ್ಟೊಂದು ಎಂ.ಓ.ಯು. ಗಳಾಗಿವೆ ಎನ್ನತಕ್ಕಂಥಾದ್ದನ್ನು ಎಲ್ಲವನ್ನೂ

ಸಹಿತ ನಾನು ಈ ಸದನದ ಮುಂದಿಡುತ್ತೇನೆ. ಇದಕ್ಕೆ ದೀರ್ಘವಾದ ಹೇಳಿಕೆ ಬೇಕಾಗುತ್ತದೆ. ನಾನು ಅಧ್ಯಕ್ಷರ ಅನುಮತಿಯನ್ನು ಕೋರಿ ಇದನ್ನು ಸದನದ ಮುಂದಿಡುತ್ತೇನೆ. ಇದು ಎರಡನೆಯದು. ಈಗ ತತ್‌ಕ್ಷಣದಲ್ಲಿ ಮಾನ್ಯ ಈಶ್ವರಪ್ಪನವರು. ಮಾಧುಸ್ವಾಮಿ ಮತ್ತು ಪರಮೇಶ್ವರ್ ಅವರ ಕನ್ಸರ್ನ್ ಏನು ಸಣ್ಣ ಕೈಗಾರಿಕೆಗಳ ಬಗ್ಗೆ ವ್ಯಕ್ತ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ಮೂರು ಲಕ್ಷ ಸಣ್ಣ ಕೈಗಾರಿಕೆಗಳು ಇವೆ. ಸುಮಾರು ಇಪ್ಪತ್ತು ಲಕ್ಷ ಜನ ಅವುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಮೂರು ಲಕ್ಷ ಸಣ್ಣ ಕೈಗಾರಿಕೆಗಳಲ್ಲಿ ಸುಮಾರು ಎಂಬತ್ತು ಸಾವಿರ ಸಣ್ಣ ಕೈಗಾರಿಕೆಗಳು ಮುಚ್ಚತಕ್ಕಂಥ ಹಂತದಲ್ಲಿವೆ, ಅವು ಮುಚ್ಚಿಹೋಗಿವೆ. ಇನ್ನೂ ಸ್ವಲ್ಪ ಜೀವಂತವಾಗಿರತಕ್ಕಂಥದ್ದು ಈ ಎರಡು ಲಕ್ಷ ಇಪ್ಪತ್ತು ಸಾವಿರ ಸಣ್ಣ ಕೈಗಾರಿಕೆಗಳು ಈ ಎಂಬತ್ತು ಸಾವಿರ ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿ ಕೊಡಬೇಕು ಎಂಬುದರ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ. ಉದ್ಯೋಗಾವಕಾಶಗಳು ಹೆಚ್ಚಾಗಲಿ ಮತ್ತು ಇದರಿಂದಲೇ ಕೆಲಸಗಳು ಹೆಚ್ಚಾಗತಕ್ಕಂಥ ಸೈದ್ಧಾಂತಿಕ ವಿಚಾರವನ್ನು ತಾವೇನು ಪ್ರಸ್ತಾಪ ಮಾಡಿದ್ದೀರಿ. ಇದರಲ್ಲಿ ಕೆಲಸ ಕೊಡಲಿಕ್ಕೆ ಅನುಕೂಲವಾಗುತ್ತದೆ. ಮತ್ತು ಪ್ರತಿಯೊಂದು ತಾಲ್ಲೂಕು ಎಂದರೆ 175 ತಾಲ್ಲೂಕುಗಳಲ್ಲಿ ಸಹಿತ ಅಲ್ಲಿ ಸಿಗತಕ್ಕಂಥ ರಾ-ಮೆಟರಿಯಲ್ಸ್‌ನ್ನು ಉಪಯೋಗಿಸಿಕೊಂಡು ಯಾವ ರೀತಿ ಕೊಡಬೇಕು ಎನ್ನುವುದರ ಬಗ್ಗೆ ಈಗಾಗಲೇ ನಾನು ಒಂದು ನೀಲಿ ನಕಾಶೆಯನ್ನು ತಯಾರು ಮಾಡಲಿಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ. ಅದು ಸಧ್ಯದಲ್ಲೇ ಬರುತ್ತದೆ. ಅದರ ಆಧಾರದ ಮೇಲೆ ಸಣ್ಣ ಕೈಗಾರಿಕೆಗಳ ಜೀವ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇನ್ನು, ಕಳೆದ ಐದು ವರ್ಷಗಳಲ್ಲಿ ಸುಮಾರು 450 ಕೋಟಿ ರೂಯಷ್ಟು ಈ ಸಬ್ಸಿಡಿ ಹಣ ಸಣ್ಣ ಕೈಗಾರಿಕೆಗಳಿಗೆ ಬರತಕ್ಕಂಥಾದ್ದು, ಸರ್ಕಾರದಿಂದ ರಿಲೀಸ್ ಆಗತಕ್ಕಂಥಾದ್ದು ಬಾಕಿ ಇದೆ. ಆದ್ದರಿಂದ ಈಗ ಯಾರ್ಯಾರು ಕೆ.ಎಸ್.ಎಫ್.ಸಿ. ಯಿಂದ ಮತ್ತು ಬೇರೆ ಕಡೆಯಿಂದ ಸಾಲ ತೆಗೆದುಕೊಂಡಿದ್ದಾರೆ. ಇದಕ್ಕೊಂದು ಆರ್ಡರ್ ಆಫ್ ಪ್ರೆಯಾರಿಟಿ ಎನ್ನತಕ್ಕಂಥಾದ್ದನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಸಹಿತ ಡಿ.ಸಿ.ಐ.ಗಳ ಮೂಲಕ ನಾವು ಮಾಡಿಸುತ್ತಿದ್ದೇವೆ. ಇದನ್ನು ಮಾಡಿ ಇನ್ನೊಂದು ಎರಡು ವಾರದ ಒಳಗಡೆ ಸುಮಾರು 85 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ತಾವು ಇದನ್ನು ಸ್ವಾಗತ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟರಮಟ್ಟಿಗೆ ಸಣ್ಣ ಕೈಗಾರಿಕೆಗಳಿಗೆ ಒಂದು ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಇನ್ನು ಉಳಿದಿರತಕ್ಕಂಥ ಸುಮಾರು 350 ಕೋಟಿ ರೂಪಾಯಿಗಳನ್ನು ಏನು ಉಳಿಯುತ್ತದೆ. ಅದನ್ನು ಬೇರೆ ಬೇರೆ ಕಡೆಯಿಂದ ರಿಸೋರ್ಸಸ್‌ನ್ನು ಮೊಬಲೈಸ್ ಮಾಡಬೇಕು. ಈಗ ಇದನ್ನೆಲ್ಲಾ ಕೆ.ಎಸ್.ಎಫ್.ಸಿ. ಯಿಂದ ಮತ್ತು ಅದೇ ರೀತಿ ಬೇರೆ ಬೇರೆ ಹಣ ಕೊಡತಕ್ಕಂಥ ಸಂಸ್ಥೆಗಳಿಂದ ತೆಗೆದುಕೊಂಡು ಯಾವರೀತಿ ಇದಕ್ಕೆ ಜೀವ ಕೊಡಬೇಕು ಎನ್ನುವುದರ ಬಗ್ಗೆ ಸಹಿತ ಸರ್ಕಾರ ಪರಿಶೀಲನೆ ಮಾಡುತ್ತಿದೆ. ತಾವು ಈ ಸದನದಲ್ಲಿ ಏನು ಮಹತ್ವದ

ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರಿಂದಾಗಿ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಈ ಸಬ್ಸಿಡಿ ರಿಲೀಸ್ ಮಾಡಬೇಕಾದರೆ ಏನಾಗಿತ್ತು ಎಂದರೆ 25 ಪರ್ಸೆಂಟ್ ಕೊಡಬೇಕಿತ್ತು. ಅದು 15 ಪ್ಲಸ್ 10. ಅಮೌಂಟ್‌ಗೆ ಬಡ್ಡಿ ಬೀಳಬಾರದು. ನಾವೇನಾದರೂ ಚೇತರಿಸಿಕೊಳ್ಳುತ್ತೇವೆ ಎಂದು ಫ್ಯಾಕ್ಟರಿಗಳನ್ನು ಅಥವಾ ಇಂಡಸ್ಟ್ರಿಗಳನ್ನು ಮಾಡಿದವರು ಬಹಳ ಜನ. ಅವರು ಬಹಳ ಕಷ್ಟ ಅನುಭವಿಸಿದ್ದಾರೆ. ಆ ಹಣಕಾಸು ಸಂಸ್ಥೆಗಳಿಗೆ ಹೇಳಿ ಆ ಭಾಗಕ್ಕೆ ಬಡ್ಡಿ ಏನಾದರೂ ವಿನಾಯ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇನ್ನು ಈ ಬ್ರಿಕ್ ಇಂಡಸ್ಟ್ರಿ ಮತ್ತು ಪೌಲ್ಟ್ರಿ ಇಂಡಸ್ಟ್ರಿಗೆ ನಾವು ಸಬ್ಸಿಡಿ ಕೊಡುವುದಿಲ್ಲ. ನಾವು ನಿಯಮ ಮಾಡಿದ್ದೇವೆ ಎಂದು ಹೇಳಿಬಿಟ್ಟಿದ್ದಾರೆ. ನಮ್ಮ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಬಂದಿರುವುದು ಈ ಇಟ್ಟಿಗೆ ಮತ್ತು ಪೌಲ್ಟ್ರಿಗಳೇ. ಅದನ್ನು ತಾವು ಪುನಶ್ಚೇತನ ಮಾಡಿಸಬೇಕಾಗುತ್ತದೆ ಏಕೆಂದರೆ ಯಾರೂ ಶ್ರೀಮಂತರು ಈ ಇಂಡಸ್ಟ್ರಿಗಳಿಗೆ ಹೋಗಿಲ್ಲ. ಮಧ್ಯಮ ವರ್ಗದವರು ಮತ್ತು ಕೆಳ ಮಧ್ಯಮ ವರ್ಗದವರು ಏನೋ ಸಾಲ ಸಿಗುತ್ತದೆ ಎಂದು ಒಂದು ಇಟ್ಟಿಗೆ ಫ್ಯಾಕ್ಟರಿ ಮಾಡಿ ಇವತ್ತು ಅಷ್ಟೂ ಕೂಡ ಮುಚ್ಚಿಹೋಗುವ ಸ್ಥಿತಿ ನಿರ್ಮಾಣವಾಗಿದೆ. ಮೂರನೇಯದು. ಈ ಕಾಯರ್‌ಗೆ ಬಹಳ ಎಫೆಕ್ಟ್ ಆಗಿದೆ. ನಮ್ಮದು ನಾರು ಮತ್ತು ಈ ನಾರಿನ ಉತ್ಪಾದನೆ ಏನಿತ್ತು. ಈಗ ಒಂದೇ ಒಂದು ಕಾಯರ್ ಫ್ಯಾಕ್ಟರಿ ಕೂಡ ನಡೆಯುವ ಸ್ಥಿತಿಯಲ್ಲಿ ಇಲ್ಲ ದಯವಿಟ್ಟು ಈ ಕಡೆಗೆ ತಾವು ಸ್ವಲ್ಪ ಗಮನ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಿಂಧ್ಯಾರವರೇ, ಒಂಬತ್ತು ವರ್ಷಗಳಿಂದ ಈ ಸಬ್ಸಿಡಿ ಇಲ್ಲದೇನೇ ಈ ಸಣ್ಣ ಕೈಗಾರಿಕೆಗಳು ಬ್ಯಾಂಕ್‌ಗಳು ಮತ್ತು ಕೆ.ಎಸ್.ಎಫ್.ಸಿ. ಯಿಂದ ಸಾಲ ಪಡೆದುಕೊಂಡುಬಂದು ನಡೆಸಬೇಕೋ ಬೇಡವೋ ಎಂದು ಒದ್ದಾಡುತ್ತಿದ್ದಾರೆ. ಅವುಗಳನ್ನು ನಡೆಸುತ್ತಿರುವಂಥ ಸಂದರ್ಭದಲ್ಲಿ ಸಬ್ಸಿಡಿ ಬರುತ್ತದೆ ಎಂದು ತಿಳಿದುಕೊಂಡು ಬೇರೆ ಬೇರೆ ಖಾಸಗಿಯಾಗಿ ಸಾಲವನ್ನು ನಾಲ್ಕು-ಐದು ಪರ್ಸೆಂಟ್‌ನಷ್ಟು ಬಡ್ಡಿ ಕೊಟ್ಟು ಆ ಇಂಡಸ್ಟ್ರಿಗಳನ್ನು ನಡೆಸುತ್ತಿದ್ದಾರೆ. ಹಾಗಾಗಿ ಈಗ ಇವತ್ತು ಏನು 85 ಕೋಟಿ ರೂಪಾಯಿಗಳನ್ನು ಇನ್ನು ಎರಡು ವಾರದಲ್ಲಿ ರಿಲೀಸ್ ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಇದನ್ನು ಖಂಡಿತವಾಗಿ ನಾನು ತುಂಬ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಉಳಿದ 350 ಕೋಟಿ ರೂ ಮೊತ್ತ ಏನಿದೆ ಅದು ಇವತ್ತು ನಿನ್ನೆಯದು ಅಲ್ಲಿ. ಅದು ಸುಮಾರು ಒಂಬತ್ತು ವರ್ಷಗಳಿಂದ ಬಾಕಿ ಇರುವುದರಿಂದ ಅವರಿಗೂ ಕೂಡ ಏನಾದರೂ ಒಂದು ಆಶ್ವಾಸನೆಯನ್ನು ತಾವು ಕೊಟ್ಟರೆ ಅವರು ಖಂಡಿತ ಈ ಸರ್ಕಾರ ನಮ್ಮ ಪರವಾಗಿ ಇದೆಯೆಂದು ಭಾವಿಸುತ್ತಾರೆ. ಇನ್ನು ಮೂರು-ನಾಲ್ಕು ತಿಂಗಳಲ್ಲಿ ಕೊನೆಪಕ್ಷ ಆರು ತಿಂಗಳಲ್ಲಾದರೂ ಇದನ್ನು ಕ್ಲೀಯರ್ ಮಾಡುತ್ತೇವೆ ಎಂದರೆ ಅವರು ಬೇರೆ ಬೇರೆ

ಕಡೆಯಿಂದ ಹಣದ ವ್ಯವಸ್ಥೆ ಮಾಡಿಕೊಂಡು ಆ ಕೈಗಾರಿಕೆಗಳನ್ನು ನಡೆಸುವುದಕ್ಕೆ ವ್ಯವಸ್ಥೆಯಾಗುತ್ತದೆ. ಈ ದಿಕ್ಕಿನಲ್ಲಿ ಉಳಿದಿರತಕ್ಕಂಥ 350 ಕೋಟಿ ರೂಪಾಯಿಗಳನ್ನು ತಾವು ಯಾವಾಗ ಬಿಡುಗಡೆ ಮಾಡಬಹುದು ಎಂಬ ಅಂಶವನ್ನು ತಿಳಿಸಿದರೆ ಈ ಕೈಗಾರಿಕೆಗಳನ್ನು ಉಳಿಸಿದಂಥ ಕೀರ್ತಿ ನಿಮಗೆ ಬರುತ್ತದೆ. ದಯವಿಟ್ಟು ಇದರ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಪ್ರಾರ್ಥನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಎರಡು ವಿಚಾರಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಅದು ಬಹಳ ಲಾಭದಾಯಕವಾಗಿಯೇ ಇತ್ತು. ಅಲ್ಲಿರತಕ್ಕಂಥ ಭ್ರಷ್ಟಾಚಾರ ಮತ್ತು ವ್ಯವಸ್ಥೆಯಿಂದ ಈ ಕಾರ್ಖಾನೆಯನ್ನು ಮುಚ್ಚತಕ್ಕಂಥ ವ್ಯವಸ್ಥೆ ಬಂದಿದೆ. ಆದ್ದರಿಂದ ನೀವು ಮತ್ತೆ ಇದರ ಬಗ್ಗೆ ಚಿಂತನೆ ಮಾಡಬೇಕು, ಏಕೆಂದರೆ ಮೈಸೂರು ಲ್ಯಾಂಪ್ಸ್‌ಗೆ ವಿಶ್ವದ ಮಾರುಕಟ್ಟೆ ಇದೆ. ಅದನ್ನು ಸರಿಯಾದ ರೀತಿಯಲ್ಲಿ ನಡೆಸಿದರೆ ಅದಕ್ಕೆ ಇರತಕ್ಕಂಥ ವ್ಯವಸ್ಥೆ ಬೇರೆ ಯಾವುದಕ್ಕೂ ಇಲ್ಲ. ಆದರೆ ಅದನ್ನು ಮುಚ್ಚುವ ಮಟ್ಟಕ್ಕೆ ಹೋಗತಕ್ಕಂಥ ಪಿತೂರಿ ಇದೆ. ಭಾರಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಆಸ್ತಿ ಅಲ್ಲಿ ಇದೆ. ಅದನ್ನು ಕಬಳಿಸತಕ್ಕಂಥ ವ್ಯವಸ್ಥೆ ಮತ್ತು ಪಿತೂರಿ ಅಲ್ಲಿ ನಡೆಯುತ್ತಿದೆ. ಇದೇ ಪರಿಸ್ಥಿತಿ ನೂತನ ವಿದ್ಯುತ್ ಕಾರ್ಖಾನೆಯಲ್ಲೂ ಇರುವಂಥಾದ್ದು ಇವೆಲ್ಲವೂ ಕೂಡ ನೂರಕ್ಕೆ ನೂರು ಕನ್ನಡಿಗರೇ ಕೆಲಸದಲ್ಲಿ ಇರತಕ್ಕಂಥ ಕಾರ್ಖಾನೆಗಳು. ಈ ವಿದ್ಯುತ್ ಕಾರ್ಖಾನೆಯ ಜಾಗವನ್ನು ಈಗ ಹರಿದು ಹಂಚಿಕೊಳ್ಳತಕ್ಕಂತ ವ್ಯವಸ್ಥೆ ಮತ್ತು ಅಲ್ಲಿ ಪಿತೂರಿ ಅಲ್ಲಿ ನಡೆಯುತ್ತಿದೆ. ಆ ವಿದ್ಯುತ್ ಕಾರ್ಖಾನೆಯ ಉತ್ಪಾದನೆ ಏನಿದೆ. ಅದು ವಿಶ್ವದ ಮಾರುಕಟ್ಟೆಗೆ ಹೋಗತಕ್ಕಂಥ ವ್ಯವಸ್ಥೆ ಇದೆ. ನಾವು ಸರಿಯಾದ ರೀತಿಯಲ್ಲಿ ಮಾಡಿದರೆ ನೂತನ ವಿದ್ಯುತ್ ಕಾರ್ಖಾನೆ ಮತ್ತು ಮೈಸೂರು ಲ್ಯಾಂಪ್ಸ್ ಮತ್ತೆ ಪುನರ್‌ಜ್ಜೀವನ ಮಾಡುವುದಕ್ಕೆ ಅವಕಾಶ ಇದೆ. ಅದಕ್ಕೆ ಸರಿಯಾದ ದಕ್ಷರು ಬಂದು ದಕ್ಷ ಆಡಳಿತ ಕೊಟ್ಟರೆ ಇದು ಸಾಧ್ಯವಾಗುತ್ತಿದೆ. ಇದರ ಬಗ್ಗೆ ತಾವು ಪ್ರಾಮಾಣಿಕ ಚಿಂತನೆ ಮಾಡಿದರೆ ಬೀದಿಗೆ ಹೋಗಿರತಕ್ಕಂಥ ಸಾವಿರಾರು ಜನ ಕಾರ್ಮಿಕರಿಗೆ ಎಲ್ಲೋ ಒಂದು ಕಡೆ ಶಕ್ತಿ ಬರುತ್ತದೆ ಮತ್ತು ಅವರ ಬಾಳು ಹಸನಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ತಮಗೆ ಹೇಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಇವತ್ತು ತಾವು ಅವುಗಳಿಗೆ ದಯವಿಟ್ಟು ಪುನಶ್ಚೇತನ ಕೊಡಬೇಕು. ಅಲ್ಲಿರತಕ್ಕಂಥ ಕಾರ್ಮಿಕರು ಮತ್ತು ಅಲ್ಲಿಯ ಬೇಡಿಕೆ ಏನಿದೆ ಅದನ್ನು ತಾವು ಗಮನಿಸಬೇಕು. ಮೈಸೂರು ಲ್ಯಾಂಪ್ಸ್ ಅಂತ ಹೇಳಿದರೆ ಎಲ್ಲಾ ಸಿ.ಎಂ.ಸಿ.ಗಳು ಇರಬಹುದು. ಟೌನ್ ಮುನಿಸಿಪಾಲಿಟಿಗಳು ಇರಬಹುದು. ಅಥವಾ ಕಾರ್ಪೋರೇಷನ್‌ಗಳು ಇರಬಹುದು. ಇವತ್ತೂ ಕೂಡ ಮೈಸೂರು ಲ್ಯಾಂಪ್ಸ್ ಉತ್ಪಾದನೆ ಸಿಗದೆ ಯಾರೋ ಖಾಸಗಿಯವರಿಂದ ತೆಗೆದುಕೊಳ್ಳತಕ್ಕಂಥಾದ್ದನ್ನು

ನಾನು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಡಿದ್ದೇನೆ. ಅಲ್ಲಿ ಎಸ್.ವಿ.ಸಿ. ಲ್ಯಾಂಪ್ಸ್ ಆಗಲಿ, ಟ್ಯೂಬ್‌ಲೈಟ್ ಆಗಲಿ, ಪ್ರತಿಯೊಂದು ಅಲ್ಲಿಯ ಉತ್ಪಾದನೆಗೆ ಅಷ್ಟು ಬೇಡಿಕೆ ಇದೆ. ಅಲ್ಲಿಯ ಗುಣಮಟ್ಟ ಬಹಳ ಚೆನ್ನಾಗಿ ಇರುವಂಥಾದ್ದು. ದಯವಿಟ್ಟು ಈ ಸಾರ್ವಜನಿಕ ಉದ್ದಿಮೆಯನ್ನು ಉಳಿಸಬೇಕು ಮತ್ತು ಅಲ್ಲಿಯ ಕಾರ್ಮಿಕರಿಗೆ ಪುನಶ್ಚೇತನ ಕೊಡಬೇಕು ಎಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ನಿಮ್ಮ ಭಾಷಣ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಉತ್ತರ ಕೊಡುತ್ತಾರೆ. ಎಲ್ಲ ಇಲಾಖೆಗಳ ಬಗ್ಗೆ ಅವರು ವಿವರಣೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ತಾವು ಯೀಲ್ಡ್ ಆಗಿದ್ದರಿಂದ ನಾನು ಈ ಸಮಯವನ್ನು ಉಪಯೋಗಿಸಿಕೊಂಡಿದ್ದೇನೆ, ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸ ಪುರ) : ಒಂದು ನಿಮಿಷ. ಮಾನ್ಯ ಈಶ್ವರಪ್ಪನವರು ಸಬ್ಸಿಡಿ ವಿಚಾರ ಹೇಳಿದರು. ಇನ್ನೊಂದು ಅಂಶವನ್ನು ನಾವು ನಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ನಮ್ಮ ಸಣ್ಣ ಕೈಗಾರಿಕೆಗಳು ಏನಿವೆ, ಅವರ ವ್ಯಾಪ್ತಿಯೊಡನೆ ಇಲ್ಲದಂಥ ಕಾರಣಗಳಿಗಾಗಿ ಅವರು ನಿಶ್ಯಕ್ತರಾಗಿಬಿಟ್ಟಿದ್ದಾರೆ. ಅವರಿಗೆ ನಾವು ಸಬ್ಸಿಡಿ ಕೊಟ್ಟರೂ ಕೂಡ ಅವರು ಪುನಃ ಚೇತನ ಪಡೆದುಕೊಂಡು ಆರೋಗ್ಯಕರವಾಗಿ ನಡೆಸುವುದಕ್ಕೆ ಸಾಧ್ಯವೇ ಇಲ್ಲ. ಯಾವ್ಯಾವ ಪದಾರ್ಥಗಳನ್ನು ಅವರು ತಯಾರು ಮಾಡುತ್ತಿದ್ದರೋ, ಆ ಎಲ್ಲಾ ಪದಾರ್ಥಗಳು ಇನ್ನೂ ಉತ್ತಮ ಗುಣಮಟ್ಟದಲ್ಲಿ ಮತ್ತು ಕಡಿಮೆ ಬೆಲೆಯಲ್ಲಿ ಮಾತುಕಟ್ಟೆಯಲ್ಲಿ ಮುಕ್ತವಾಗ ಸಿಗುತ್ತಿವೆ. ಇದಕ್ಕೆ ಕಾರಣ ಗ್ಲೋಬಲೈಸೇಶನ್. ನಾವು ಸಬ್ಸಿಡಿ ಕೊಟ್ಟು ಇನ್ನೊಂದಷ್ಟು ಹಣವನ್ನು ಮತ್ತೆ ತೆಗೆದುಕೊಂಡು ಹೋಗಿ ಹಳ್ಳಕ್ಕೆ ಹಾಕುವಂಥಾದ್ದು ಆಗುತ್ತದೆಯೇ ಹೊರತು ಇನ್ನೇನೂ ಇಲ್ಲ, ಅದರ ಬದಲಿಗೆ ಈ ಸಬ್ಸಿಡಿಗೆ ಇನ್ನೂ ಹಣ ಅಡ್ಜಸ್ಟ್ ಮಾಡಿ ಅವರ ಮೇಲೆ ಇರುವ ಸಾಲದ ಹೊರೆಯನ್ನು ತೆಗೆದರೆ ಅವರ ಪಾಡಿಗೇ ಏನಾದರೂ ಮಾಡಿಕೊಂಡು ಬೇರೆ ಜೀವನ ಮಾಡಿಕೊಳ್ಳುತ್ತಾರೆ. ಇಲ್ಲದೇ ಹೋದರೆ ನಾವು ಸಬ್ಸಿಡಿಯನ್ನು ಕೊಟ್ಟೆವು ಎನ್ನತಕ್ಕಂಥ ತೃಪ್ತಿ ಇರುತ್ತದೆಯೇ ಹೊರತಾಗಿ ಎಲ್ಲೋ ಒಂದು ಕಡೆ ಅವರನ್ನು ಸಾಲ ಮುಕ್ತರನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ ಇಲ್ಲ, ನಾವು ಕೆಲವು ಸೆಕ್ಟರ್ಸ್‌ಗಳಲ್ಲಿ ಕೆಲವು ಪದಾರ್ಥಗಳು ಇಲ್ಲಿಗೆ ಬರುವುದನ್ನು ತಡೆಯಬೇಕು. ಎಕ್ಸ್‌ಕ್ಲುಸಿವ್ ಆಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗೆ ಮಾತ್ರ ಅಲ್ಲಿ ಪ್ರೈಮಸಿ ಇರಬೇಕು. ಆದರೆ ಹಾಗೆ ಅವರಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಸಾಧ್ಯ ಇಲ್ಲ ಅಂದರೆ, ನಾವು ಅವರನ್ನು ಸಾಲ ಮುಕ್ತರನ್ನಾಗಿ ಮಾಡಬೇಕೇ ಹೊರತು ನಾವು ಇದನ್ನು ಹೀಗೆ ಮುಂದುವರೆಸಿದರೆ ಈ Piece meal arrangement does not help them. He is still continues to be a debtor.

1.40 ಪಿ.ಎಂ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಸಣ್ಣ ಕೈಗಾರಿಕೆಗಳು ಉತ್ಪಾದನೆ ಮಾಡಿದರೆ ಮಾರುಕಟ್ಟೆ ಇಲ್ಲ. ಮಾರುಕಟ್ಟೆಯಲ್ಲಿ ಅವರ ಗೂಡ್ಸ್ ಮಾರಾಟವಾಗುವುದಿಲ್ಲ. ಮಾನ್ಯ ಸದಸ್ಯರಾದ ರಮೇಶ್‌ಕುಮಾರ್ ಅವರು ಹೇಳಿದಂತೆ ಮನಾಪಲ್ಲಿ ಕ್ಯಾಪಿಟಲಿಸ್ಟ್, ಬಿಗ್ ಇಂಡಸ್ಟ್ರೀಸ್ ಅದಕ್ಕಿಂತ ಉತ್ತಮವಾದ ಗೂಡ್ಸ್‌ನ್ನು ಉತ್ಪಾದನೆ ಮಾಡಿ ಕೊಡುತ್ತಿದ್ದಾರೆ. ಅವರು ಅವರ ಜೊತೆ ಕಾಂಪಿಟ್ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಹಲ್ಲು ಉಜ್ಜುವ ಬ್ರಷ್‌ನಿಂದ ಹಿಡಿದು ಎಲ್ಲಾ ಬೇರೆ ದೇಶಗಳಿಂದ ಬರುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಹೇಳುತ್ತಿರುವುದು ಸರಿ, ಅನೇಕ ಸಣ್ಣ ಕೈಗಾರಿಕೆಗಳು ಹಣಕಾಸಿನ ತೊಂದರೆಯಿಂದಾಗಿಯೇ ನಿಂತು ಹೋಗುತ್ತಿವೆ ಕೆಲವರಿಗೆ ಮಾರುಕಟ್ಟೆ ಇದೆ. ಅವರಿಗೆ ರಾ–ಮೆಟೀರಿಯಲ್ ಸಿಗುತ್ತಿದೆ. ಎಲ್ಲಾ ಸರಿ. ಈಗ ತಮಗೆ ಗೊತ್ತಿದೆ ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕ್‌ಗಳಿಗೆ ಎಲ್ಲಿಯೇ ಹೋದರೂ ಸಹ ಆ ಸಬ್ಸಿಡಿ ಒಂದು ಇವರ ಇನ್‌ವೆಸ್ಟ್‌ಮೆಂಟ್ ಒಂದು ಬ್ಯಾಂಕ್‌ಗಳ ಹಣ ಈ ಮೂರು ಸಹ ಸೋರ್ಸ್ ಆಫ್ ಫೈನಾನ್ಸ್‌ನಲ್ಲಿ ಸೇರಿಕೊಳ್ಳುತ್ತಾರೆ. ಇವರ ಇನ್‌ವೆಸ್ಟ್‌ಮೆಂಟ್ ಹಾಕಿಕೊಂಡಿರುತ್ತಾರೆ. ಬ್ಯಾಂಕ್ ಲೋನ್ ಮತ್ತು ಕೆ ಎಸ್ ಎಫ್ ಸಿ ಲೋನ್ ಬಂದ್ ಆಗಿದೆ. ಸಬ್ಸಿಡಿ ಹಣ ಬಂದರೆ ಮಾತ್ರ ಆ ಒಂದು ಕ್ಯಾಪಿಟಲ್‌ಅನ್ನು ತುಂಬಲು ಸಾಧ್ಯವಾಗುತ್ತದೆ. ಸೋರ್ಸ್ ಆಫ್ ಫೈನಾನ್ಸ್‌ನಲ್ಲಿ. ಇವತ್ತು 9 ವರ್ಷಗಳಿಂದ ಬಾಕಿ ಇರುವುದರಿಂದ ಅವರು ಮಾರ್ಕೇಟಿಂಗ್ ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಅವರಿಗೆ ಸಬ್ಸಿಡಿ ಹಣ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಹಳಷ್ಟು ಸಣ್ಣ ಕೈಗಾರಿಕೆಗಳು ಇವೆ. ಅದರಲ್ಲೂ ಬೆಂಗಳೂರು ನಗರದಲ್ಲಿ ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ರಾಜಾಜಿನಗರ ಇಂಡಸ್ಟ್ರೀಯಲ್ ಏರಿಯಾ ಇತರೇ ಕಡೆಗಳಲ್ಲಿ ಸಹ ಇವೆ. ಈ ಸಣ್ಣ ಕೈಗಾರಿಕೆಗಳಲ್ಲಿ ತಯಾರು ಮಾಡುವ ಅನೇಕ ಉಪಕರಣಗಳು ಇವೆ. ಅದರಲ್ಲಿ ಉದಾಹರಣೆಗೆ ಒಂದು ಸ್ಟಾರ್ಟರ್‌ಗಳು ನಮ್ಮ ಎನು ಅಟೋಮೆಟಿಕ್ ಸ್ವಿಚ್ಚಸ್, ಅದು ಚೈನಾದಿಂದ ಬರತಕ್ಕಂಥಾದ್ದು 250 ರೂಪಾಯಿಗಳಿಗೆ ಸಿಗುತ್ತದೆ. ನಮ್ಮ ದೇಶದಲ್ಲಿ ಉತ್ಪಾದನೆಯಾಗುವಂತಾದ್ದು 750 ರೂಪಾಯಿಗಳಾಗುತ್ತದೆ. ಆದರೆ ಕಂಟ್ರಾಕ್ಟ್‌ದಾರರು 250 ರೂಪಾಯಿಗಳಿಗೆ ಸಿಗುವಂತಾದ್ದನ್ನು ಹಾಕುತ್ತಾರೆ. ಒಂದು ಗ್ಲೋಬಲೈಜೇಶನ್ ಆಗುತ್ತಿರುವಂಥಾದ್ದು ಒಂದು ಅನಾಹುತ. ಇನ್ನೊಂದು ಆರ್ಥಿಕವಾಗಿ ಬೇಕಾಗಿರತಕ್ಕಂಥ ಸಬ್ಸಿಡಿ. ಮತ್ತೊಂದು ಮಾರುಕಟ್ಟೆ. ಈ ಮೂರು ವಿಷಯಗಳಲ್ಲಿ ಬಹಳಷ್ಟು ಅನುಭವ ಇರತಕ್ಕಂಥ ಸಚಿವರು ದಯವಿಟ್ಟು ಸಣ್ಣ ಕೈಗಾರಿಕೆಗಳನ್ನು ಉಳಿಸಬೇಕಾದರೆ ಇದರ ಬಗ್ಗೆ ಹೆಚ್ಚಿನ ಆಸಕ್ತಿ ಕೊಟ್ಟು ಸಾವಿರಾ ೦

ಜನ ಕಾರ್ಮಿಕರನ್ನು ಉಳಿಸಬೇಕು. ಮತ್ತು ಬೆಂಗಳೂರು ನಗರದಲ್ಲಿರತಕ್ಕಂಥ ಬಹುತೇಕ ಶೇಕಡ 75 ಪರ್ಸೆಂಟ್ ಕಾರ್ಮಿಕರು ಇದ್ದಾರೆ. ವಿಶೇಷವಾಗಿ ರಾಜಾಜಿನಗರದಲ್ಲಿ ಅಂದರೆ ಆಗಿನ ರಾಜ್ಯಪಾಲರಾಗಿದ್ದಂತಹ ಜಯಚಾಮರಾಜೇಂದ್ರ ಒಡೆಯರ್‌ರವರು ಅವತ್ತು ಏನು ಒಂದು ಇಂಡಸ್ಟ್ರೀಯಲ್ ಟೌನ್‌ಶೀಪ್ ಮಾಡಿದರು. ಅದು ಇವತ್ತು ನನ್ನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಹೋಗಿ ಪರ್ಯಟನೆ ಮಾಡಿದರೆ ಗೊತ್ತಾಗುತ್ತದೆ. ಬಹಳಷ್ಟು ಕಾರ್ಖಾನೆಗಳು ಇವತ್ತು ಕಲ್ಯಾಣ ಮಂಟಪಗಳು ಬೇರೆ ಬೇರೆ ಆಗಿವೆ. ಇದಕ್ಕೆ ಕಾರಣ ಏನು ಎಂದು ಕೇಳಿದರೆ ಅಲ್ಲಿ ನಮ್ಮ ಉತ್ಪನ್ನಗಳು ವ್ಯಾಪಾರವಾಗುವುದಿಲ್ಲ, ನಮಗೆ ಮಾರುಕಟ್ಟೆ ಇಲ್ಲ ಮತ್ತು ಹಣದ ಕೊರತೆ, ಸಬ್ಸಿಡಿ ಈ ರೀತಿಯ ಕಾರಣಗಳನ್ನು ಹೇಳುತ್ತಾರೆ. ದಯವಿಟ್ಟು ಅದರ ಬಗ್ಗೆ ಹೆಚ್ಚಿನ ಆಸ್ತೆಯನ್ನು ವಹಿಸಿ ಈ ಕಾರ್ಮಿಕ ವರ್ಗ ಮತ್ತು ಕಾರ್ಖಾನೆಗಳನ್ನು ಉಳಿಸಬೇಕೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಶಿವಾನಂಧ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಶುಗರ್ ಇಂಡಸ್ಟ್ರೀ ಪಾಲಿಸಿ ಬಗ್ಗೆ ನಾವು ಬಹಳಷ್ಟು ಸಲ ಪ್ರಸ್ತಾಪ ಮಾಡಿದ್ದೇವೆ. ಈಗ 7–8 ಶುಗರ್ ಫ್ಯಾಕ್ಟರಿಗಳು ಅಕ್ವಿಡೇಶನ್‌ಗೆ ಬಂದಿವೆ. ತಮಗೂ ಗೊತ್ತಿದೆ. ಬ್ರಹ್ಮಾವರ ಶುಗರ್ ಫ್ಯಾಕ್ಟರಿ ಸಹ ಇದೆ. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ಎನ್ನುವುದನ್ನು ಸ್ಪೆಲ್ ಔಟ್ ಮಾಡಿ. ಏಕೆಂದರೆ ಕೋಜನರೇಶನ್ ಮತ್ತು ಎಕ್ಸ್‌ಪ್ಯಾನ್‌ಶನ್ ಬಗ್ಗೆ ತಮ್ಮ ಯೋಚನೆ ಇದೆ. ಮತ್ತು ಇನ್ನೂ ಕೆಲವೊಂದು ಶುಗರ್ ಕೇನ್ ಕಲ್ಟಿವೇಶನ್ ಡೆವಲಪ್‌ಮೆಂಟ್ ಆಗದೇ ಇರುವುದರಿಂದ ಅವು ಕ್ಲೋಜರ್‌ಗೋಸ್ಕರ ಬಂದಿವೆ. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ? ಅಲ್ಲಿಂದ ಎನ್ ಜಿ ಇ ಎಫ್ ಬಗ್ಗೆ, ಎನ್ ಜಿ ಇ ಎಫ್ ಈಗ ಬಿ.ಐ.ಎಫ್ ಆರ್ ಮುಂದೆ ಹೋಗಿ, ಅಕ್ವಿಡೇಶನ್‌ಗೆ ಬಂದಿದೆ. ಅದರ ಬಗ್ಗೆ ಸಹ ತಾವು ಬಹಳ ಸಲ ಮಾತನಾಡಿದ್ದೀರಿ. ಈಗ ನಿಮ್ಮ ಅಭಿಪ್ರಾಯ ಏನು ಅದರ ಬಗ್ಗೆ ಎನ್ನುವುದನ್ನೂ ಸಹ ಸ್ವಲ್ಪ ಸ್ಪೆಲ್ ಔಟ್ ಮಾಡಿ.

ಶ್ರೀ ಎಂ ವೈ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅನೇಕ ಆಯಿಲ್ ಇಂಡಸ್ಟ್ರಿಗಳನ್ನು ಮುಚ್ಚಿಹೋಗಿವೆ. ಫಾಮ್ ಆಯಿಲ್ ಇಂಪೋರ್ಟ್ ಆಗುತ್ತಿದೆ. ಸಬ್ಸಿಡಿ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಆಯಿಲ್ ಇಂಡಸ್ಟ್ರಿಗಳು ಮುಚ್ಚಿ ಹೋಗಿವೆ. ಅದರ ಬಗ್ಗೆ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಆಮೇಲೆ ಆಳಂದ್ ಸಕ್ಕರೆ ಕಾರ್ಖಾನೆ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಇರುವುದು ಒಂದೇ. ಆಳಂದ್ ಸಕ್ಕರೆ ಕಾರ್ಖಾನೆ ಇವತ್ತು ಮುಚ್ಚಿದೆ. ಅದನ್ನು ಪುನಶ್ಚೇತನ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಹಿಮಾ ಪಟೇಲ್ (ಚನ್ನಗಿರಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ನರೇಂದ್ರಬಾಬುರವರು ರಾಜಾಜಿನಗರ ಮತ್ತು ಬೇರೆ ಬೇರೆ ಇಂಡಸ್ಟ್ರೀಯಲ್ ಏರಿಯಾಗಳಲ್ಲಿ ಇರುವ ಇಂಡಸ್ಟ್ರೀಯಲ್ ಶೆಡುಗಳನ್ನು ಮುಚ್ಚಿ

ಕಲ್ಯಾಣ ಮಂಟಪಗಳನ್ನು ಮಾಡುತ್ತಿದ್ದಾರೆಂದು ಹೇಳಿದರು. ಈಗ ಅದೇ ಒಂದು ಒಳ್ಳೆಯ ಉದ್ಯಮ ಎಂದು ಕಾಣಿಸುತ್ತದೆ. ಕಲ್ಯಾಣ ಮಂಟಪಗಳನ್ನು ಮಾಡಿ ಅದರಿಂಥ ಏನು ಪ್ರೊಡ್ಯೂಸ್ ಆಗುತ್ತದೆ ಅದನ್ನೇ ಒಂದು ಉದ್ಯಮ ಮಾಡಿಕೊಂಡು ನಮ್ಮ ದೇಶದ ಜನತೆ ಮುಂದಕ್ಕೆ ಹೋಗಬಹುದು ಎಂದು ಕಾಣಿಸುತ್ತದೆ.

ಶ್ರೀ ಪಿ ಜಿ ಆರ್ ಸಿಂಧ್ಯಾ : (ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರು ಮತ್ತು ಅನುಭವಸ್ಥರು ಆಗಿರತಕ್ಕಂಥ ಶ್ರೀಮಾನ್ ರಮೇಶ್ ಕುಮಾರ್‌ರವರು ಮತ್ತು ವಾಟಾಳ್ ನಾಗರಾಜ್‌ರವರು ಈ ಗ್ಲೋಬಲೈಜೇಸ್ ಹಿನ್ನಲೆಯಲ್ಲಿ ಸಣ್ಣ ಕೈಗಾರಿಕೆಗಳ ಸ್ಟೇಟಸ್ ಕೋ ಪೊಸಿಷನ್ ಅನ್ನು ಅವರು ಹೇಳಿದ್ದಾರೆ. Actually each Industry got its own Problem, ಅದರದೇ ಒಂದು ಇಂಡಸ್ಟ್ರಿಗೂ ಮತ್ತೊಂದು ಇಂಡಸ್ಟ್ರಿಗೂ ಪ್ರಾಬ್ಲಂ ಇದೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಆದರೆ ತಾವು ಹೇಳಿರತಕ್ಕಂಥಾದ್ದನ್ನು ನಾನೂ ಸಹ ಒಪ್ಪುತ್ತೇನೆ. ಆ ಕಡೆ ಸಬ್ಸಿಡಿ ಹಣ ತೆಗೆದುಕೊಂಡು ಹೋಗುತ್ತಾರೆ. ಆ ಕಡೆ ಸಾಲ ತೀರಿಸಿಕೊಳ್ಳುತ್ತಾರೆ ಫ್ಯಾಕ್ಟರಿ ಮುಚ್ಚಿಕೊಂಡು ಹೋಗುತ್ತಾರೆ ಎನ್ನತಕ್ಕಂಥಾದ್ದನ್ನು ತಾವು ಹೇಳಿದ್ದೀರಿ. ಅದಕ್ಕೋಸ್ಕರವೇ ಇದನ್ನು ಇವ್ಯಾಲುವೇಶನ್ ಮಾಡಬೇಕು ಅವರು ಇನ್‌ವೆಸ್ಟಿಟ್ಯೂಷನ್ಸ್‌ಗಳಿಂದ ಸಾಲ ತೆಗೆದುಕೊಂಡಿದ್ದಾರೆ. ಆ ಸಾಲದ ಬಾಬತ್ತಿಗೆ ನಾಮ ಸಬ್ಸಿಡಿಯನ್ನು ಕೊಡುತ್ತೇವೆಯೇ ಹೊರತು ಕೈಗೆ ಹಣ ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಅದರಿಂದ ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಮತ್ತು ನಮ್ಮ ಸರ್ಕಾರದವರು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. 85 ಕೋಟಿ ರೂಪಾಯಿಗಳನ್ನು ಕೆ ಎಸ್ ಎಫ್ ಸಿ ಮೂಲಕವಾಗಿ ಸಾಲದ ಬತ್ತಿಗೆ ಬರತಕ್ಕಂಥ ಸಬ್ಸಿಡಿಯನ್ನು ಕೊಡುತ್ತೇವೆ. ಮಾನ್ಯ ಮಾಧುಸ್ವಾಮಿಯವರು ಒಂದು ರೆಲ್‌ವೆಂಟ್ ಪಾಯಿಂಟ್‌ನ್ನು ರೈಜ್ ಮಾಡಿದ್ದಾರೆ. ಈ ಕಾಯಲ್ ಇಂಡಸ್ಟ್ರೀ, ಇಟ್ಟಿಗೆ ಮತ್ತು ಡೈರಿಗೆ ಸಬ್ಸಿಡಿ ಅಪ್ಲೈ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸ್ವಲ್ಪ ಏನಾದರೂ ಉದ್ಯೋಗಕ್ಕೆ ಅವಕಾಶ ಇದೆ, ಸ್ವಲ್ಪ ಹಣ ಸಿಗುತ್ತದೆ ರೈತರ ಕೈಗೆ ಎನ್ನುವುದಾದರೆ ಅಥವಾ ರೈತಾಪಿ ಮಕ್ಕಳ ಕೈಗೆ ಇಂಡಸ್ಟ್ರೀ ಮಾಡುವುದಾದರೆ ಈ ಮೂರೇ. ಇದನ್ನು ರಿವೈವ್ ಮಾಡಲಿಕ್ಕೆ ಈ ಕಾಯರ್ ಇಂಡಸ್ಟ್ರೀಸ್ ಬೋರ್ಡ್ ನನ್ನ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಈ ಸದನಕ್ಕೆ ಮಾತನ್ನು ಕೊಡುತ್ತೇನೆ ಈ ಕಾಯರ್, ಇಟ್ಟಿಗೆ, ಡೈರಿ ಇದನ್ನು ಯಾವ ರೀತಿ ರಿವೈವ್ ಮಾಡಬೇಕು, ಇದರ ಪ್ರಾಬ್ಲಂ ಏನು ಎನ್ನುವುದನ್ನು ತಿಳಿದುಕೊಂಡು, ಐ ಯಾಮ್ ಸಾರಿ, ಫಾಲ್ಟ್ರಿ, ಇದನ್ನು ನಾನು ಮಾಡುತ್ತೇನೆಂದು ಹೇಳಿ, ಮಾನ್ಯ ಸದಸ್ಯರಾದ ಈಶ್ವರಪ್ಪನವರು ಇದನ್ನು 6 ತಿಂಗಳೊಳಗೆ ಕೊಡಬೇಕೆಂದು ಹೇಳಿದರು. ಇನ್ನೇನು 15–20 ದಿವಸದಲ್ಲಿ ಸಬ್ಸಿಡಿ ಹಣವನ್ನು ಕೊಡುವುದಕ್ಕೆ ಪ್ರಾರಂಭವಾಗುತ್ತದೆ. ಇನ್ನು 6 ತಿಂಗಳೊಳಗೆ 350 ಕೋಟಿ ರೂಪಾಯಿಗಳಷ್ಟು ಉಳಿಯುತ್ತದೆ ಅದನ್ನೂ ಕೊಡಿ ಎಂದು ಹೇಳಿದ್ದೀರಿ

ಅದು ಯಾವುದೇ ಸರ್ಕಾರಕ್ಕೂ ಕೂಡ ಕಷ್ಟಸಾಧ್ಯವಾಗಿರತಕ್ಕಂಥ ಮಾತು. 4–5 ವರ್ಷಗಳಲ್ಲಿ ಕೊಡದೇ ಇರತಕ್ಕಂಥಾದ್ದನ್ನು 6 ತಿಂಗಳಲ್ಲೇ ಕೊಡಿ ಎಂದು ಹೇಳಿದರೆ, ಕೆಲವು 9 ವರ್ಷಗಳು, ಕೆಲವು 4–5 ವರ್ಷಗಳು, ಬರದೇ ಇರತಕ್ಕಂಥಾದ್ದು.

ಶ್ರೀ ಕೆ. ಜಯಪ್ರಕಾಶ್. ಹೆಗಡೆ : ಕೊನೆಯದು ಮಾನ್ಯ ಬಿ ಎ ಮೊಹಿದ್ದೀನ್ ಅವರ ಸಣ್ಣ ಕೈಗಾರಿಕೆ

ಶ್ರೀ ಪಿ ಜಿ ಆರ್ ಸಿಂಧ್ಯಾ ಸಚಿವರಾಗಿದ್ದಾಗ : ಹೌದು ಅಧ್ಯಕ್ಷರೇ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದನ್ನು ಒಂದೇ ವರ್ಷದಲ್ಲಿ ತೀರಿಸಬೇಕೆನ್ನುವುದು ಸ್ವಲ್ಪ ಕಷ್ಟದ ಕೆಲಸ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ಕಳೆದ 4–5 ವರ್ಷಗಳಿಂದ ಸರ್ಕಾರ ಕೊಡಲಿಲ್ಲ ಈ ಸಬ್ಸಿಡಿ ಹಣವನ್ನು ತುರ್ತಾಗಿ ರಿಲೀಜ್ ಮಾಡಬೇಕೆಂದು ಹೇಳಿ ತಾವೇ ಈ ಭಾಗದಲ್ಲಿ ಕುಳಿತಿದ್ದಾಗ ಅಗ್ರಹಪಡಿಸಿದ್ದೀರಿ.

ಶ್ರೀ ಪಿ ಜಿ ಆರ್ ಸಿಂಧ್ಯಾ : ಅದನ್ನೇ ನಾವೀಗ ಮಾಡುತ್ತಿರುವುದ. That is what I am doing. 450 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆಂದು ನಾನು ಹೇಳುತ್ತಿರುವುದು.

ಶ್ರೀ ಕೆ ಎಸ್ ಈಶ್ವರಪ್ಪ : ಇಡೀ ರಾಜ್ಯ ಸಬ್ಸಿಡಿ ಹಣಕೋಸ್ಕರ ಕಾಯುತ್ತಿದ್ದಾರೆ.

ಶ್ರೀ ಪಿ ಜಿ ಆರ್ ಸಿಂಧ್ಯಾ : ನನ್ನ ಹೇಳಿಕೆಯನ್ನು ತಾವು ಕೇಳಿ. ಆಮೇಲೆ ಕ್ಲಾರಿಫಿಕೇಶನ್ ಕೇಳಿ. ಈಗ 6 ತಿಂಗಳೊಳಗೆ ಈ ಸಬ್ಸಿಡಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. 6 ತಿಂಗಳೊಳಗೆ ಯಾವುದೇ ಸರ್ಕಾರಕ್ಕೂ ಕೂಡ ಸ್ವಲ್ಪ ಕಷ್ಟವಾಗುತ್ತದೆ. ಆದರೆ ಈ 350 ಕೋಟಿ ರೂಪಾಯಿಗಳನ್ನು ಯಾವ ರೀತಿ ಮೊಬಲೈಜ್ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ನಾವು ಮತ್ತು ನಮ್ಮ ಇಲಾಖೆಯವರು ಕುಳಿತು ಸಂಪುಟದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಖಂಡಿತವಾಗಿ ಸಹ ಈ 80 ಸಾವಿರ ಸಣ್ಣ ಕೈಗಾರಿಕೆಗಳು ಏನು ಜೀವ ಕಳೆದುಕೊಂಡಿವೆ ಇನ್ನು 2 ಲಕ್ಷ 20 ಸಾವಿರ ಸಣ್ಣ ಕೈಗಾರಿಕೆಗಳಲ್ಲಿ ಸಬ್ಸಿಡಿಗೆ ಬರತಕ್ಕಂಥಾದ್ದು ಇದೆ ಅದೆಲ್ಲವನ್ನೂ ಸಹ ಸ್ಪಂದಿಸುವುದಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟು, ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ಮೈಸೂರು ಲ್ಯಾಂಪನ್ನು ಅದು ಈಗಾಗಲೇ ಮುಚ್ಚಿದೆ. ಅದು ಮುಚ್ಚಿರತಕ್ಕಂಥಾದ್ದು. ಅದು ಬಿ.ಐ.ಎಫ್.ಆರ್ ಮುಂದೆ ಹೋಗಿ ಪ್ರೊಸೆಸ್ ಎಲ್ಲಾ ಪೂರ್ಣಗೊಂಡು ಮುಗಿದಿರತಕ್ಕಂಥಾದ್ದು. ನಾನು ಒಪ್ಪಿಕೊಳ್ಳುತ್ತೇನೆ ಮೈಸೂರು ಲ್ಯಾಂಪ್‌ಗೆ ವರ್ಲ್ಡ್ ಮಾರುಕಟ್ಟೆಯಲ್ಲಿ ಇಂಟರ್ ನ್ಯಾಷನಲ್ ಮಾರುಕಟ್ಟೆಯಲ್ಲಿ ಇಂಟರ್‌ನಲ್ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಡಿಕೆ ಇರತಕ್ಕಂಥಾದ್ದು ನಿಜ, One of the best lamps we were making But unfortunately ಅದು ಆಗಿದೆ. ಆದರೆ ಒಂದು ಭರವಸೆಯನ್ನು ನಾನು ನಿಮಗೆ ಕೊಡುತ್ತೇನೆ, ಅದರ ಆಸ್ತಿಯನ್ನು ಸರ್ಕಾರ ಯಾರಿಗೂ ಸಹ ಕೊಡಲಿಕ್ಕೆ ಅಷ್ಟು

ಸುಲಭವಾಗಿ ಬಿಡುವುದಿಲ್ಲ ನಾವು ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಅಲ್ಲಿ ರಿಯಲ್ ಎಸ್ಟೇಟ್ ವ್ಯಾಲ್ಯು ಇರುತ್ತದೆ ಎನ್ನುವುದು ನನಗೆ ಅರ್ಥವಾಗುತ್ತದೆ. ಅದನ್ನು ರಿವ್ಯೆವ್ ಮಾಡಬೇಕು ಎನ್ನತಕ್ಕಂಥ ಸೂಚನೆಯನ್ನು ತಾವು ಕೊಟ್ಟಿದ್ದೀರಿ, ಸರ್ಕಾರದಿಂದ ರಿವ್ಯೆವ್ ಮಾಡುವುದಕ್ಕೆ ಕಷ್ಟವಾಗಬಹುದು, ಆದರೆ ಇದನ್ನು ಪ್ರೈವೇಟ್ ಸೆಕ್ಟಾರ್ ಇನ್‌ವೆಸ್ಟರ್ಸ್‌ನ್ನು ಏನಾದರೂ ಕರೆದು ತಂದು ಏನಾದರೂ ಮಾಡಲಿಕ್ಕೆ ಆಗುತ್ತದೆಯೇ ಪ್ರೈವೇಟ್ ಪಾರ್ಟೀಸ್ ಪಾರ್ಟಿಸಿಪೇಟ್ ಮಾಡುವುದಕ್ಕೆ ಏನಾದರೂ ಆಗುತ್ತದೆಯೇ ಎನ್ನುವುದನ್ನು ನಾನು ಖಂಡಿತವಾಗಿ ವಿಚಾರ ಮಾಡುತ್ತೇನೆ. ನನಗೆ ಗೊತ್ತಿರುವ ಹಾಗೆ ವಿದ್ಯುತ್ ಕಾರ್ಖಾನೆ ಇನ್ನೂ ಮುಚ್ಚತಕ್ಕಂಥ ಸ್ಥಿತಿಗೆ ತಲುಪಿಲ್ಲ. ಅದು ಕೆಲಸ ಮಾಡುತ್ತಿದೆ. ಆದರೆ ಅಲ್ಲಿರತಕ್ಕಂಥ ಜಾಗವನ್ನು ಯಾರೋ ಕಬಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದು ಏನು ಇದೆ, ಇರಬಹುದು ಇಲ್ಲ ಎಂದು ನಾನು ಹೇಳುವುದಿಲ್ಲ. ನಾನು ಖಂಡಿತವಾಗಿ ಅದನ್ನು ಪರಿಶೀಲನೆ ಮಾಡುತ್ತೇನೆ. ಅದಕ್ಕೆ ನಾವಾಗಲೇ ನಮ್ಮ ಸರ್ಕಾರವಾಗಲಿ ಅವಕಾಶ ಮಾಡಿಕೊಡುವುದಿಲ್ಲ.

ಮಾನ್ಯ ಎಂ.ವೈ. ಪಾಟೀಲರು ಹಾಗು ಮಾನ್ಯ ಶಿವಾನಂದ ಪಾಟೀಲರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಈ ಶುಗರ್ ಇಂಡಸ್ಟ್ರೀಸ್ ಹಾಗೂ ಆಯಿಲ್ ಇಂಡಸ್ಟ್ರೀಸ್ ಇವು ನೇರವಾಗಿ ಕೈಗಾರಿಕಾ ಮಂತ್ರಿಗೆ ಬರುವಂತಹದ್ದಲ್ಲ. ಶುಗರ್ ಇಂಡಸ್ಟ್ರೀ ಶುಗರ್ ಮಿನಿಸ್ಟರ್‌ಗೆ ಹೋಗುತ್ತದೆ, ಆಯಿಲ್ ಇಂಡಸ್ಟ್ರಿ ಕೋ ಅಪರೇಟಿವ್ ಮಿನಿಸ್ಟರ್‌ಗೆ ಹೋಗುತ್ತದೆ. ಕೆಲವು ಕೋ ಅಪರೇಟಿವ್ ಸೆಕ್ಟಾರ್‌ನಲ್ಲಿವೆ ಕೆಲವು ಅಯಾ ಸಂಬಂಧಪಟ್ಟ ಇಲಾಖೆಗೆ ಬರುತ್ತದೆ. ಈಗ ನಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲೂ ಕೂಡ ಒಂದು ಶುಗರ್ ಫ್ಯಾಕ್ಟರಿ ಇದೆ, ಎಂಪಿಎಂನವರು ಭದ್ರಾವತಿಯಲ್ಲಿ ಒಂದು ಶುಗರ್ ಫ್ಯಾಕ್ಟರಿಯನ್ನು ನಡೆಸುತ್ತಿದ್ದಾರೆ, That sugar factory is fairly doing well. ಮಂಡ್ಯ ಶುಗರ್ ಫ್ಯಾಕ್ಟರಿಯೂ ನಮಗೆ ಬರುತ್ತದೆ. It is fairly doing well. ಆದುದರಿಂದ ಅವರು ಕೊಟ್ಟಿರುವ ಸಲಹೆಗಳನ್ನು ಈ ಸರ್ಕಾರ ಖಂಡಿತವಾಗಿ ಸ್ವೀಕಾರ ಮಾಡಿದೆ, ನಾನು ಇದನ್ನು ಪ್ರಾಮಾಣಿಕವಾಗಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಛೇರ್ಮನ್ : ಡಾ ; ಜಿ. ಪರಮೇಶ್ವರ್‌ರವರೆ, ನೀವು ಮಧ್ಯಾಹ್ನ ಪ್ರಾರಂಭ ಮಾಡಿ, ಮಾನ್ಯ ಸಭಾಪತಿಗಳು, ಮಾನ್ಯ ಸಭಾಧ್ಯಕ್ಷರು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ತಮ್ಮೆಲ್ಲರನ್ನೂ ಬ್ಯಾಂಕ್‌ವೆಟ್ ಹಾಲ್‌ನಲ್ಲಿ ಎರ್ಪಡಿಸಿರುವ ಭೋಜನಕೂಟಕ್ಕೆ ಅಹ್ವಾನ ಮಾಡಿದ್ದಾರೆ ಎಲ್ಲರಿಗೂ ಅಹ್ವಾನವನ್ನು ಕೊಟ್ಟಿದ್ದಾರೆ ಈಗ ಸದನವನ್ನು ಮೂರು ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮೂರು ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)